ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


Swabhimani Sahakari

Pages : 30 / 12₹

Volume - 18
Issue - 07
July - 2021


# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

"ಸಹಕಾರದಿಂದ ಸಮೃದ್ಧಿ" ಎಂಬ ಘೋಷಣೆಯೊಂದಿಗೆ
ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ
ರಚನೆ ಕುರಿತು ಐತಿಹಾಸಿಕ ನಿರ್ಣಯ
ಕೇಂದ್ರದಿಂದ ಹಾಗೂ ರಾಜ್ಯದ ಹಲವಾರು
ಗಣ್ಯರ ಸಂತಸದ ಸ್ವಾಗತ

ಕೋವಿಡ್ ಸಂಕಷ್ಟದ ಸಮಯದಲ್ಲಿ
ನಮ್ಮ ಬದುಕಿನಲ್ಲಿ ಭರವಸೆ ತುಂಬಿ,
ಹಗಲಿರುಳು ಸೇವೆ ಸಲ್ಲಿಸಿ ತಮ್ಮ ಜೀವ
ತೆತ್ತ ವೈದ್ಯರ ನೆನಪಿನಲ್ಲಿ...

ರಾಷ್ಟ್ರೀಯ
ವೈದ್ಯರ ದಿನ
ಜುಲೈ 1
ಶುಭಾಶಯಗಳು



ಲಸಿಕೆ ಹಾಕಿಸಿಕೊಳ್ಳಿ
ಜೀವ ಉಳಿಸಿಕೊಳ್ಳಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5326

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1388

ಜುಲೈ 03
ಅಂತರರಾಷ್ಟ್ರೀಯ
ಸಹಕಾರ ದಿನ

ಜುಲೈ 21
ಬಕ್ರೀದ್

ಜುಲೈ 24
ಗುರು ಪೂರ್ಣಿಮ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಸಹಕಾರಿ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡುವುದಾದರೆ ಹಲವಾರು ವಿಷಯಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಸಂಪನ್ಮೂಲಗಳ ಸಂಗ್ರಹ, ಸದ್ಬಳಕೆ, ಕಛೇರಿಯ ಕೆಲಸಕಾರ್ಯಗಳ ಅಚ್ಚುಕಟ್ಟು ನಿರ್ವಹಣೆ, ಗುಣಾತ್ಮಕ ಸಾಲಗಳ ನೀಡಿಕೆ, ದಾಖಲಾತಿಗಳ ನಿರ್ವಹಣೆ, ಸದಸ್ಯರೊಡನೆ ಹಾಗೂ ಉತ್ತಮ ಸಂಪರ್ಕ, ಸಾರ್ವಜನಿಕರಲ್ಲಿ ಸರಕಾರದಲ್ಲಿ ಸಹಕಾರಿಯ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸುವುದು, ಸಹಕಾರಿಗಳೊಡನೆ ಇತರ ಸಹಕಾರ ಸಂಸ್ಥೆಗಳೊಡನೆ ಆಂತರಿಕ ಸಹಕಾರ ಮತ್ತು ಸಹಕಾರಿಯ ಸದಸ್ಯರಿಗೆ, ಪದಾಧಿಕಾರಿಗಳಗೆ ಹಾಗೂ ಸಿಬ್ಬಂದಿಯವರಿಗೆ ನಿರಂತರ ಶಿಕ್ಷಣ ಹಾಗೂ ತರಬೇತಿ ಇವುಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ.

# ಸದಸ್ಯರೊಡನೆ ನಿರಂತರ ಸಂಪರ್ಕ, ಪರಿಣಾಮಕಾರಿ ಶಿಕ್ಷಣ, ತರಬೇತಿ ಸಹಕಾರಿಗಳ ಅಭಿವೃದ್ಧಿಗೆ ಪೂರಕ

**ಆತ್ಮೀಯರೇ,**

ಎಲ್ಲ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ಈಗ ತಾನೇ ರಾಜ್ಯದ ಬಹುತೇಕ ಸ್ಥಳಗಳಲ್ಲಿ ಕೋವೀಡ್ ಮಹಾಮಾರಿಯ ಅಬ್ಬರ ಕಡಿಮೆಯಾಗುತ್ತಿರುವುದು ಸಂತೋಷದ ವಿಷಯ. ಹಾಗಂತ ಎಚ್ಚರ ತಪ್ಪುವಂತಿಲ್ಲ. ಇದುವರೆಗೆ ಸರಕಾರ ಹಾಗೂ ಆರೋಗ್ಯ ಸಂಸ್ಥೆಗಳು ಸೂಚಿಸಿದ ಎಲ್ಲ ನಿಯಮಗಳನ್ನು ಪಾಲಿಸುತ್ತ ಬಂದಿರುವುದು ಇನ್ನೂ ಮುಂದೆಯೂ ಪಾಲಿಸುವುದು ಎಲ್ಲರಿಗೂ ಕ್ಷೇಮಕರ. ಸಮಾಜದಲ್ಲಿ ನೆಮ್ಮದಿ ಶಾಂತಿ ಬೆಳವಣಿಗೆಗೆ ಇದು ಸಹಾಯಕಾರಿಯಾಗುತ್ತದೆ. ಆದ್ದರಿಂದ ದಯವಿಟ್ಟು ಮಾಸ್ಕ್ ಹಾಕುವುದನ್ನು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದನ್ನು ಮತ್ತು ನಿರಂತರ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದನ್ನು ಮುಂದುವರೆಸಿ. ಇದು ಸಂಯುಕ್ತ ಸಹಕಾರಿಯ ಕಳಕಳಿಯ ಮನವಿ. ಸ್ನೇಹಿತರೆ ಎಲ್ಲರಿಗೂ ಬಕ್ರೀದ್ ಹಾಗೂ ಗುರುಪೂರ್ಣಿಮ ಹಬ್ಬಗಳ ಶುಭಾಶಯಗಳು,

ಸಹಕಾರಿ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡುವುದಾದರೆ ಹಲವಾರು ವಿಷಯಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಸಂಪನ್ಮೂಲಗಳ ಸಂಗ್ರಹ, ಸದ್ಬಳಕೆ, ಕಛೇರಿಯ ಕೆಲಸಕಾರ್ಯಗಳ ಅಚ್ಚುಕಟ್ಟು ನಿರ್ವಹಣೆ, ಗುಣಾತ್ಮಕ ಸಾಲಗಳ ನೀಡಿಕೆ, ದಾಖಲಾತಿಗಳ ನಿರ್ವಹಣೆ, ಸದಸ್ಯರೊಡನೆ ಹಾಗೂ ಉತ್ತಮ ಸಂಪರ್ಕ, ಸಾರ್ವಜನಿಕರಲ್ಲಿ ಸರಕಾರದಲ್ಲಿ ಸಹಕಾರಿಯ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸುವುದು, ಸಹಕಾರಿಗಳೊಡನೆ ಇತರ ಸಹಕಾರ ಸಂಸ್ಥೆಗಳೊಡನೆ ಆಂತರಿಕ ಸಹಕಾರ ಮತ್ತು ಸಹಕಾರಿಯ ಸದಸ್ಯರಿಗೆ, ಪದಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ನಿರಂತರ ಶಿಕ್ಷಣ ಹಾಗೂ ತರಬೇತಿ ಇವುಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಸಹಕಾರಿ ಕ್ಷೇತ್ರದ ಯಶಸ್ವಿಗೆ ಶಿಕ್ಷಣ ತರಬೇತಿ ಹಾಗೂ ಪ್ರಚಾರ ಅತ್ಯಂತ ಮಹತ್ವದ್ದಾಗಿದೆ. ಇದು ಸಹಕಾರ ತತ್ವಗಳಲ್ಲಿ ಒಂದಾಗಿದೆ. ಸಹಕಾರಿ ಸಂಸ್ಥೆಗಳು ಯಾವುದೇ ಒಂದು ಗುಂಪಿನ, ಒಂದು ಸಮಾಜದ ಅಥವಾ ಒಬ್ಬ ವ್ಯಕ್ತಿಯ ಅಥವಾ ಒಂದು ಕುಟುಂಬದ ಸೊತ್ತಲ್ಲ. ಸಹಕಾರಿ ಕ್ಷೇತ್ರದ ಅಭಿವೃದ್ಧಿ ಕುಂಠಿತವಾಗುವುದಕ್ಕೆ ಸದಸ್ಯರ ಸಕ್ರೀಯ ಭಾಗವಹಿಸುವಿಕೆ ಕಡಿಮೆ ಇರುವುದು ಒಂದು ಪ್ರಮುಖ ಕಾರಣ ಎಂಬುದನ್ನು ಅನೇಕ ವರದಿಗಳಲ್ಲಿ ಹೇಳಿರುವುದನ್ನು ಸಹಕಾರಿಗಳು ಗಮನಿಸಬೇಕು. ಆದ್ದರಿಂದ ಸಹಕಾರಿಗಳ ಸದಸ್ಯರಿಗೆ, ನಿರ್ದೇಶಕರುಗಳಿಗೆ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವ ನಿರಂತರ ಪ್ರಯತ್ನಗಳನ್ನು ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿಯವರು ಮಾಡಬೇಕಾಗುತ್ತದೆ. ಸಿಬ್ಬಂದಿಯವರಿಗೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಬಗ್ಗೆ ತರಬೇತಿ ನೀಡಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಪ್ರತಿ ವರ್ಷ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳೊಡನೆ ಸಂಪರ್ಕ ಸಭೆಗಳನ್ನು ಏರ್ಪಡಿಸುತ್ತ ಬಂದಿರುವುದು, ರಾಜ್ಯಾದ್ಯಂತ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ತಮಗೆ ತಿಳಿದಿದೆ. ಈ ಪ್ರಯತ್ನದಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ತಾವುಗಳು ತಮ್ಮ ಹಂತದಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗುವಿರೆಂದು ಸಂಯುಕ್ತ ಸಹಕಾರಿಯು ಆಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾಣ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05-16
ಸಂಯುಕ್ತ ಸಹಕಾರಿಗಯ ಪ್ರಕಟಣೆ ಪುಸ್ತಕಗಳ ವಿವರ .......... 17
ಸರ್ಕಾರದ ಸುತ್ತೋಲೆ .......... 18
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 19-24
ಲೇಖನಗಳು :
ಒತ್ತಡ ನಿರ್ವಹಣೆ .......... 25-28
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-15) .......... 29-30

# ಸಂಪಾದಕೀಯ

## ತಾಂತ್ರಿಕತೆಯಲ್ಲಿ ಮತ್ತೊಂದು ಗರಿಮೆಗೆ ಸೌಹಾರ್ದ ಸಹಕಾರಿಗಳು ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ (ಡಿಸಿಬಿಎಮ್) ಡಿಪ್ಲೋಮಾ ಅಂತಿಮ ಪರೀಕ್ಷೆಗಳು ಆನ್‌ಲೈನ್ ಮೂಲಕ

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಲ್ಲಿ 3ನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ ಜನವರಿ 1 ರಂದು ಪ್ರಾರಂಭವಾಗಿ ಪ್ರತಿ 2 ತಿಂಗಳಿಗೊಮ್ಮೆ ಸಂಪರ್ಕವರ್ಗಗಳನ್ನು ನಡೆಸಿ ಕೊನೆಗೆ ಜೂನ್ ತಿಂಗಳಲ್ಲಿ ಅಂತಿಮ ಪರೀಕ್ಷೆಯನ್ನು ನಡೆಸಲಾಯಿತು. ಕಳೆದ ಬಾರಿ ಮತ್ತು ಈ ಬಾರಿ ಕೋರೋನಾ ಮಹಾಮಾರಿಯಿಂದಾಗಿ ಒಂದು ಸಂಪರ್ಕವರ್ಗವನ್ನು ಮಾತ್ರ ಶಿಬಿರಾರ್ಥಿಗಳ ಖುದ್ದು ಹಾಜರಿಯಿಂದ (Physical attendance) ನಡೆಸಲು ಸಾಧ್ಯವಾಗಿದ್ದು ನಂತರದ 2 ಸಂಪರ್ಕ ವರ್ಗಗಳನ್ನು ಮತ್ತು ಅಂತಿಮ ಪರೀಕ್ಷೆಗಳನ್ನು ಸಹ ವಿಶೇಷ ಸಾಫ್ಟ್‌ವೇರ್ ಮೂಲಕವೇ ನಡೆಸಿ ಯಶಸ್ವಿಯಾಗಿರುವುದು ಸಂಯುಕ್ತ ಸಹಕಾರಿಯು ಅತ್ಯಂತ ಹೆಮ್ಮೆ ಪಡುವ ವಿಚಾರ.

ಸಹಕಾರಿಗಳು, ಶಿಕ್ಷಣ ತಜ್ಞರು, ತಾಂತ್ರಿಕ ತಜ್ಞರು ಹಾಗೂ ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳ ಮಾತಿನಲ್ಲಿ ಹೇಳುವುದಾದರೆ ಸೌಹಾರ್ದ ಸಹಕಾರಿಗಳ ಕ್ಷೇತ್ರದಲ್ಲಿ ಸಿಬ್ಬಂದಿಯವರಿಗೆ ಇದೊಂದು ನೂತನ ವ್ಯವಸ್ಥೆ. ಅವರು ಈ ತಾಂತ್ರಿಕತೆಯನ್ನು ಬಳಸಿ ಸಂಪರ್ಕವರ್ಗಗಳಿಗೆ ಹಾಜರಾಗಿರುವುದು ಮತ್ತು ಅಂತಿಮ ಪರೀಕ್ಷೆ ತೆಗೆದುಕೊಂಡಿರುವುದು ಶಿಬಿರಾರ್ಥಿಗಳಿಗೆ ಹೆಚ್ಚಿನ ಸಂತೋಷವನ್ನು ಹಾಗೂ ನೂತನ ಅನುಭವವನ್ನು ತಂದಿದೆ ಎಂದು ಅವರುಗಳು ತಿಳಿಸಿರುವುದು ಸಂಯುಕ್ತ ಸಹಕಾರಿಯ ಪ್ರಯತ್ನಕ್ಕೆ ಹಾಗೂ ಇವುಗಳನ್ನು ಯಶಸ್ವಿಮಾಡುವಲ್ಲಿ ಸಹಕರಿಸಿದ ಅಧಿಕಾರಿಗಳು ಸಿಬ್ಬಂದಿಯವರು ವಹಿಸಿರುವ ಶ್ರಮ ಸಾರ್ಥಕ ಹಾಗೂ ಅವರೆಲ್ಲರೂ ಅಭಿನಂದನೀಯರು. ರಾಷ್ಟ್ರದ ಹಾಗೂ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಯುಕ್ತ ಸಹಕಾರಿಗೆ ಗರಿಮೂಡಿಸಿದೆ.

ಇಲ್ಲಿಗೆ ಈ ಕಾರ್ಯನಿಲ್ಲುವುದಿಲ್ಲ. ಇದು ನಿರಂತರ ಪ್ರಕ್ರಿಯೆ. ಕಳೆದ ವರ್ಷದಲ್ಲಿ ಪ್ರತಿಷ್ಠಿತ ವಿಕಾಸ ಸೌಹಾರ್ದ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಂಪೂರ್ಣ ಪ್ರಕ್ರಿಯೆಯನ್ನು (ಸಂದರ್ಶನ ಸಹ ಸೇರಿದಂತೆ) ಈ ವಿಶೇಷ ಸಾಫ್ಟ್‌ವೇರ್ ಮೂಲಕ ನಡೆಸಲು ಸಂಯುಕ್ತ ಸಹಕಾರಿಯು ಸಹಕರಿಸಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ವಿಶ್ವಾಸದಾಯಕವಾಗಿ ವಿಶಿಷ್ಟ ರೂಪದಲ್ಲಿ ಬೆಳೆಯುವ ಅಗತ್ಯತೆ ಇದೆ. ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ಇನ್ನೂ ಹೆಚ್ಚಿನ ಸಹಕಾರಿಗಳು ಹಾಗೂ ಸಿಬ್ಬಂದಿಯವರು ಪಾಲ್ಗೊಳ್ಳಬೇಕಾಗಿದೆ. ಈ ರೀತಿಯ ಆಧುನಿಕ ತಂತ್ರಜ್ಞಾನದ ನಿರಂತರ ಬಳಕೆಗೆ ಅವರನ್ನೆಲ್ಲ ಮಾನಸಿಕವಾಗಿ ಸಿದ್ಧಪಡಿಸಿ ಈ ತಾಂತ್ರಿಕತೆಯ ಸವಾಲನ್ನು ಅವಕಾಶವನ್ನಾಗಿ ಬಳಸಿಕೊಂಡು ಪ್ರಗತಿಯತ್ತ ದಾಪುಗಾಲು ಹಾಕಬೇಕಿದೆ. ಈ ಬಗ್ಗೆ ಸಂಯುಕ್ತ ಸಹಕಾರಿಯಗಳು ಸಂಶೋಧನೆ ಮತ್ತು ಅಭಿವೃದ್ಧಿ (R&D) ಮಾಡುವ ಮೂಲಕ ಕಾರ್ಯನಿರ್ವಹಿಸುವ ಅಗತ್ಯತೆ ಇದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಗುಣಮಟ್ಟದ ನಿರ್ವಹಣೆಯಲ್ಲಿ ಈಗ ಇರುವ ಉತ್ತಮ ಹಾಗೂ ಪ್ರಶಂಸೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಮುಂದುವರೆಸಿಕೊಂಡು ಹೋಗುವುದು ನಮ್ಮ ಸವಾಲು ಹಾಗೂ ನಮ್ಮ ಆದ್ಯ ಕರ್ತವ್ಯ ಎಂಬುದನ್ನು ಅರಿತು ಕಾರ್ಯನಿರ್ವಹಿಸಬೇಕಿದೆ.

## "ಹುಟ್ಟು ಆಕಸ್ಮಿಕ – ಮರಣ ಖಚಿತ"

ಶ್ರೇಣಿ 63



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ದೈವನಿರ್ಮಿತ ನಿಸರ್ಗದಲ್ಲಿ ನೀರು ಹರಿಯುವುದು, ಗಾಳಿಬೀಸುವುದು, ಭೂಮಿ ತಿರುಗುವುದು, ಬೆಂಕಿ ಸುಡುವುದು ಹಾಗೂ ಆಕಾಶದ ನಿಲ್ಕಮತೆಯಂಥಹ ಗುಣಗಳನ್ನು "ಬದಲಾಗದ ಶಾಶ್ವತ" ನಿಯಮಗಳೆಂದು ಕರೆಯುತ್ತೇವೆ. ಅಂತೆಯೇ ಹುಟ್ಟಿದ ಪ್ರತಿ ಜೀವಿಯು ದೇಹನಾಶವೆಂಬ ಪ್ರಕ್ರಿಯೆಯ ಮೂಲಕ ಬಾಹ್ಯಸಾವನ್ನು ಪಡೆಯುವುದು ಸಹ ವಿಧಿಯ ಕಠೋರ ನಿಯಮಗಳಲ್ಲೊಂದಾಗಿದೆ. ತನ್ಮೂಲಕ ನಿರ್ದಿಷ್ಟ ಅವಧಿಯ ನಂತರ ಪ್ರತಿ ಜೀವಿಯ ತನ್ನೊಡವಿರುವ ಐಶ್ವರ್ಯವನ್ನು, ಸ್ಥಿರಾಸ್ತಿಗಳನ್ನು ಹಾಗೂ ಬಂಧು ಬಾಂಧವರನ್ನು ತ್ಯಜಿಸಲೇ ಬೇಕು. ಇಂಥಹ ಅನಿವಾರ್ಯ ಸ್ಥಿತಿಯ ಸಾವು ನಮ್ಮೆಲ್ಲರನ್ನೂ ಭಯಕ್ಕೊಳಪಡಿಸಿ ದಿಗ್ಭ್ರಂತರನ್ನಾಗಿ ಮಾಡಿಬಿಡುತ್ತದೆ. ಎಂಥಹ ಜ್ಞಾನಿಯೇ ಆಗಿರಲಿ ಅದೇಕೋ ಸಾಯಲು ತನ್ನ ಇಚ್ಚೆಯನ್ನು ವ್ಯಕ್ತಪಡಿಸುವುದಿಲ್ಲ. ಇಷ್ಟವಿರಲಿ ಇಲ್ಲದಿರಲಿ ಸಾಯಲೇಬೇಕೆಂಬ ಕಠಿಣಾತಿ ಕಠಿಣ ನಿಯಮದ ಅಸ್ತಿತ್ವವಿದೆಯೆಂದು ಗೊತ್ತಿದ್ದರೂ ಸಾವನ್ನು ಯಾರೂ ಸ್ವಾಗತಿಸುವುದಿಲ್ಲ.

ಸಾವಿನ ನಂತರ ನಾವು ಏನಾಗುತ್ತೇವೆ ಪ್ರೇತವೋ ಭೂತವೋ ಪುನರ್ಜನ್ಮವೋ ಪರಲೋಕವೋ ಎಂಬುದರ ಅರಿವು ಎಲ್ಲದ ನಮಗೆ ಈ ಹಿಂದೆ ಮರಣ ಹೊಂದಿದವರು ಯಾರೂ ತಿರುಗಿ ಬಂದಿಲ್ಲ ಹಾಗೂ ತದನಂತರದ ಘಟನೆಗಳ ಬಗ್ಗೆ ವರದಿ ನೀಡಿಲ್ಲವಾದ್ದರಿಂದ ಅದರ ಬಗ್ಗೆ ತಲೆಕಡಿಸಿಕೊಳ್ಳದೇ ಕರ್ತವ್ಯಶೀಲನಾಗಿ ಲೋಕಕ್ಕೆ ಉದಾಹರಣಾರ್ಥವಾಗಿ ಬದುಕೆಂಬ ಸಂದೇಶದ ಪದ್ಯವನ್ನು ಆಧ್ಯಾತ್ಮ ಕವಿ ಡಿ.ವಿ.ಜಿಯವರು ನಮಗಿತ್ತಿದ್ದಾರೆ.

*ಮರಣದಿಂ ಮುಂದೇನೋ ಪ್ರೇತವೋ ಭೂತವೋ*
*ಪರಲೋಕವೋ ಪುನರ್ಜನ್ಮವೋ ಅದೇನೋ*
*ತಿರುಗಿ ಬಂದವರಿಲ್ಲ ವರದಿ ತಂದವರಿಲ್ಲ*
*ಧರೆಯ ಬಾಳ್ಗದರಿನೇ ॥ ಮಂಕುತಿಲ್ಲ ॥*

ಸಾವಿನ ಬಗ್ಗೆ ಆತ್ಮಕ್ಕೆ ಯಾವುದೇ ಸ್ವಾತಂತ್ರ್ಯವಿಲ್ಲ ಬದಲಾಗಿ ಈ ವಿಷಯದಲ್ಲಿ ವಿಧಿಯದೇ ಮೇಲೆ, ಆತನ ಇಚ್ಚೆಯಂತೇ ಎಲ್ಲ ಸಾವು ನೋವುಗಳು ಸಂಭವಿಸುತ್ತವೆ. ಸಾವೊಂದು ತಪ್ಪಿಸಲಾಗದ ಘಟನೆಯಾಗಿರುವುದರಿಂದ ಬದುಕಿರುವ ಪ್ರತಿ ಸೆಕೆಂಡನ್ನೂ ಪರಮಾತ್ಮ ಸುತರಾದ ಅನ್ಯ ಜೀವಿಗಳನ್ನು ಪ್ರೀತಿ ಮಮತೆಗಳಿಂದ ನೋಡುತ್ತ ವಿಶ್ವದೊಡೆಯ ಸರ್ವೇಶ್ವರನ ಚಿಂತನೆಯಲ್ಲಿ ತೊಡಗಿಸಕೊಂಡು ಕೆಟ್ಟ ಆಲೋಚನೆಗಳು ಮನಸ್ಸಿನೊಳಗೆ ಪ್ರವೇಶವಾಗುವಂತೆ ಬಾಳಿದರೆ ಕರ್ತನಿಗೆ ಸಂತೋಷವುಂಟಾಗಿ ಸರ್ವಸುಖಗಳನ್ನು ತಪ್ಪದೇ ದಯಪಾಲಿಸಿ ಅಂತಹ ಶುದ್ಧಾತ್ಮ ಜೀವಿಗಳನ್ನು ತನ್ನ ಪಾಲುದಾರರೆಂದು ಭಾವಿಸಿ ಭೂಮ್ಯಾಕಾಶಗಳಲ್ಲಿನ ಯಾವುದೇ ಶಕ್ತಿಗಳು ಅಂಥಹ ಜೀವಿಗೆ ಕೆಡುಕೆಸಗದಂತೆ ನೋಡಿಕೊಳ್ಳತ್ತಾ ಯಾರಲ್ಲಿ ಒಳ್ಳೆಯ ಗುಣಗಳಿವೆಯೋ ಅವುಗಳನ್ನು ಪ್ರಾರ್ಥಿಸುತ್ತಾ, ಇಲ್ಲದಂಥಹ ಶುಭಗುಣಗಳನ್ನು ಅಸ್ತಿತ್ವಗೊಳಿಸಿ (Developing good qualities and installing what they lack) ಹರಸಿ ಆಶೀರ್ವಾದಿಸಿ, ಕ್ಷಮಿಸಿ, ಕಾಪಾಡಿ ಶುಭ ಬದುಕನ್ನು ದಯಪಾಲಿಸುತ್ತಾನೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 17,242 ಆಗಿರುತ್ತದೆ. ಇವುಗಳ ಪೈಕಿ 9438 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7804.

**ಜೂನ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 42, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 0.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2922 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 305 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,447ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1022 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 103 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜೂನ್ ತಿಂಗಳಿನಲ್ಲಿ 23 ಪ್ರಕರಣ ದಾಖಲಾಗಿರುತ್ತವೆ.

## ౩ನೇ ಜುಲೈ ಅಂತರರಾಷ್ಟ್ರೀಯ ಸಹಕಾರ ದಿನ

### ಧ್ಯೇಯ – ಎಲ್ಲರೂ ಕೂಡಿಕೊಂಡು ಉತ್ತಮವಾಗಿ ಸಹಕಾರ ಕ್ಷೇತ್ರವನ್ನು ಪುನರ್ ನಿರ್ಮಾಣ ಮಾಡೋಣ.

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುವಲ್ಲಿ ಸಹಕಾರಿ ಸಂಸ್ಥೆಗಳು ಸಹಕಾರಿಯಾಗುತ್ತವೆ" ಎಂಬುದನ್ನು ದೃಢೀಕರಿಸಲು ಪ್ರತಿ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

# International Day of Cooperatives 2021

## Theme : Rebuild Better Together

3 July, the International Day of Cooperatives (#CoopsDay) will be celebrated as "Rebuild better together". Cooperatives around the world will showcase how they are meeting the COVID-19 pandemic crisis with solidarity and resilience and offering communities a people-centred and environmentally just recovery.

"In the last year, we have witnessed how the cooperative model has been working towards the well-being of people and respect for the planet, underscoring what the cooperative movement stands for. We will indeed rebuild better together, and I'm confident that we will see many stories of how the cooperative movement can help communities become stronger in the post-pandemic world", declared Bruno Roelants, Director General of the International Cooperative Alliance (ICA).

In the fields of health, agriculture, production, retail, finance, housing, employment, education, social services and many other spheres where cooperatives are found, the more than one billion cooperative members worldwide continue to prove that no one needs to face a crisis like the pandemic on their own. #CoopsDay will be the occasion to spread the word about how a human-centred business model, sustained by the cooperative values of self-help and solidarity and the ethical values of social responsibility and concern for community, can reduce inequality, create shared prosperity and respond to the immediate impacts of COVID-19.

The ICA calls on cooperators and partners around the world to get ready to celebrate #CoopsDay on 3 July and to show the world how we can Rebuild better together.

The 2021 #Coopsday actions' pack including the logo, key messages and other digital resources will be available soon.

**About the International Day of Cooperatives :**

Marked by cooperatives worldwide since 1923 and officially proclaimed by the United Nations General Assembly on the centenary of the ICA in 1995, the International Day of Cooperatives is celebrated annually on the first Saturday of July.

The aim of #CoopsDay is to increase awareness of cooperatives and promote the movement's ideas of international solidarity, economic efficiency, equality, and world peace. Since 1995, the ICA and the United Nations through Committee for the Promotion and Advancement of Cooperatives (COPAC) have jointly set the theme for the celebration of #CoopsDay.

This year's celebration will be the 27th International Day of Cooperatives recognized by the United Nations and the 99th International Cooperative Day.

Through #CoopsDay, local, national and global policymakers, civil-society organisations and the public in general can learn about the contribution of cooperatives to a just future for all.

## ಸೌಹಾರ್ದ ಸಹಕಾರಿಗಳಿಗೆ ಮತ್ತು ದೇಶದ ಎಲ್ಲಾ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯ ಕಿರುಕುಳ ನಿವಾರಣೆಗೆ ಮತ್ತೊಮ್ಮೆ ಮನವಿ.

### ಕೇಂದ್ರದ ಗೃಹ ಸಚಿವ ಶ್ರೀ ಅಮಿತ್ ಷಾ, ಕೇಂದ್ರದ ಹಣಕಾಸು ಇಲಾಖೆಯ ಕಂದಾಯ ಕಾರ್ಯದರ್ಶಿ ಶ್ರೀ ತರುಣ ಬಜಾಜ ಐ.ಎ.ಎಸ್. ಹಾಗೂ ಕೇಂದ್ರ ನೇರ ತೆರಿಗೆ ಸಲಹಾ ಮಂಡಳಿ ಅಧ್ಯಕ್ಷ ಶ್ರೀ ಜಗನ್ನಾಥ ಬಿದ್ಯಾಧರ ಮೊಹಾಪಾತ್ರ ಐ.ಆರ್.ಎಸ್ ಇವರ ಭೇಟಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಮತ್ತು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರು ದಿನಾಂಕ 01.07.2021 ರಂದು ದೆಹಲಿಗೆ ತೆರಲಿ ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ ಷಾ, ಹಣಕಾಸು ಇಲಾಖೆಯ ಕಂದಾಯ ಕಾರ್ಯದರ್ಶಿ ಶ್ರೀ ತರುಣ ಬಜಾಜ ಐ.ಎ.ಎಸ್. ಹಾಗೂ ಕೇಂದ್ರ ನೇರ ತೆರಿಗೆ ಸಲಹಾ ಮಂಡಳಿ ಅಧ್ಯಕ್ಷ ಶ್ರೀ ಜಗನ್ನಾಥ ಬಿದ್ಯಾಧರ ಮೊಹಾಪಾತ್ರ ಐ.ಆರ್.ಎಸ್ ಇವರನ್ನು ಭೇಟಿ ಮಾಡಿ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಪದೇ ಪದೇ ಕಿರುಕುಳಗಳು ಮುಂದುವರೆದಿದ್ದು ಇವುಗಳ ನಿವಾರಣೆಗೆ ಕೇಂದ್ರದಿಂದ ಯಾವುದೇ ಕ್ರಮ ಜರುಗಿಲ್ಲ ಎಂಬ ಬಗ್ಗೆ ಮನವರಿಕೆ ಮಾಡಿ ಶೀಘ್ರದಲ್ಲಿ ಈ ಬಗ್ಗೆ ಕ್ರಮವಾಗಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ದೇಶದ 8.5 ಲಕ್ಷ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಕಾಯ್ದೆಯ ಕೆಲವು ಕಲಂಗಳಿಗೆ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಅಧಿಕಾರಿಗಳು ಶೀಘ್ರದಲ್ಲಿಯೆ ಈ ಸಮಸ್ಯೆಯನ್ನು ನಿವಾರಿಸಲು ಕ್ರಮವಿಡುವುದಾಗಿ ತಿಳಿಸಿದರು.

## ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ (ಎನ್.ಸಿ.ಯು.ಐ) ಮುಖ್ಯ ಕಾರ್ಯನಿರ್ವಹಕರುಗಳಾದ ಡಾ. ಸುಧೀರ ಮಹಾಜನ, ಐ.ಎ.ಎಸ್.(ನಿವೃತ್ತ) ಇವರ ಭೇಟಿ.



ದೇಶದ ಸಹಕಾರ ಚಳುವಳಿಯ ಅತ್ಯುನ್ನತ ಸಂಸ್ಥೆಯಾಗಿರುವ ರಾಷ್ಟ್ರೀಯ ಸಹಕಾರಿ ಯೂನಿಯನ್ನಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಸುಧೀರ ಮಹಾಜನ ಇವರನ್ನೂ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಭೇಟಿ ಮಾಡಿ ದೇಶದ ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆ ವಿಷಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. ಡಾ. ಸುಧೀರ ಮಹಾಜನ ರವರು ಸಕಾರಾತ್ಮಕವಾಗಿ ಸ್ಪಂದಿಸಿ ದೇಶದ ಎಲ್ಲ ಸಹಕಾರಿಗಳಿಗೆ ಮಾತೃ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಎನ್.ಸಿ.ಯು.ಐ ಈ ಬಗ್ಗೆ ಸಂಬಂಧಿಸಿದವರೊಡನೆ ವ್ಯವಹರಿಸಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುವುದೆಂದು ತಿಳಿಸಿದರು.

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರಿಗಳ ಉಪ ನಿಬಂಧಕರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ**

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ.**

**ನಂ.62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ) ಪೈಪ್‌ಲೈನ್ ರಸ್ತೆ, ಬೆಂಗಳೂರು-55**

ಈ ಮೂಲಕ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ತಿಳಿಸುವುದೆನೆಂದರೆ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದ ದಾವಾ ಪ್ರಕರಣಗಳಿಗೆ ಸಂಬಂದಿಸಿದಂತೆ ಬ್ಯಾಂಕ್ ಖಾತೆಯು ಬದಲಾವಣೆಯಾಗಿರುತ್ತದೆ. ಆದ ಕಾರಣ ಸೌಹಾರ್ದ ಸಹಕಾರಿಗಳು ದಾವಾ ಶುಲ್ಕವನ್ನು (ARBITRATION) ಈ ಕೆಳಗೆ ನೀಡಿರುವ ಖಾತೆಗೆ ಜಮೆ ಮಾಡಲು ಸೂಚಿಸಿದೆ.

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಬ್ಯಾಂಕ್ ಖಾತೆ ಮಾಹಿತಿ**

**ACCOUNT NAME : DRCS-R441, - ACCOUNT NO : 9921201006031, - IFSC CODE : CNRB0010424**

ಸಹಿ/–

**ಸಹಕಾರಿಗಳ ಉಪ ನಿಬಂಧಕರು**

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

# "ಸಹಕಾರದಿಂದ ಸಮೃದ್ಧಿ" ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ರಚನೆ

**ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹಾಗೂ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಕೇಂದ್ರ ಸರ್ಕಾರದ ಹಂತದಲ್ಲಿ ಅತ್ಯಗತ್ಯವಾಗಿದ್ದ ಪ್ರತ್ಯೇಕ ಸಹಕಾರ ಸಚಿವಾಲಯದ ಬಗೆಗಿನ ಬೇಡಿಕೆಯನ್ನು ಕೇಂದ್ರ ಸರ್ಕಾರ ಒಪ್ಪಿ ಜಾರಿಗೆ ತಂದಿರುವುದನ್ನು ಅಭಿನಂದಿಸುತ್ತ, ಈ ದೇಶದ ಸಹಕಾರ ಚಳುವಳಿಯಲ್ಲಿ ಮೈಲುಗಲ್ಲಾಗಲಿರುವ ಈ ಐತಿಹಾಸಿಕ ನಿರ್ಣಯದ ಬಗ್ಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಕೃಷ್ಣಾರೆಡ್ಡಿ ಇವರು ಬೆಂಗಳೂರಿನಲ್ಲಿ ನಡೆಸಿದ ಪತ್ರಿಕಾ ಗೋಷ್ಠಿಯ ವಿವರಗಳು.**

- ಈ ದೇಶದ ಸಹಕಾರಿ ಚಳುವಳಿಗೆ 117 ವರ್ಷಗಳ ಇತಿಹಾಸ, ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರ, ಹೊಸ ಆರ್ಥಿಕ ನೀತಿ ಜಾರಿ ಹಾಗೂ ದೇಶದ ಸಂವಿಧಾನಕ್ಕೆ 97ನೇ ತಿದ್ದುಪಡಿಯನ್ನೊಳಗೊಂಡಂತೆ ಸಹಕಾರಿ ಕ್ಷೇತ್ರ ಅನೇಕ ಏಳೂ– ಬೀಳುಗಳ ಮಧ್ಯೆ ಗಣನೀಯ ಸಾಧನೆಯನ್ನ ಮಾಡಿದೆ. ಅಮುಲ್, ಇಫ್ಕೋ, ಕ್ರಿಪ್ಕೋ, ಕ್ಯಾಂಪ್ಕೋ ಮುಂತಾದ ರಾಷ್ಟ್ರ ಮಟ್ಟದ ಸಂಸ್ಥೆಗಳು, ರಾಜ್ಯ ಹಾಗೂ ಅಂತರರಾಜ್ಯ ವ್ಯಾಪ್ತಿಯನ್ನೊಳಗೊಂಡ ಅನೇಕ ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಕ್ರೆಡಿಟ್ ಸಹಕಾರ ಸಂಘಗಳು ಸೇರಿದಂತೆ ದೇಶದಲ್ಲಿ 8.5 ಲಕ್ಷ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ಚಳುವಳಿಯಲ್ಲಿ 30 ಕೋಟಿಗಿಂತ ಹೆಚ್ಚು ಸದಸ್ಯರಾಗಿ ತೊಡಗಿಸಿ ಕೊಂಡಿದ್ದಾರೆ. ಅವುಗಳಲ್ಲಿ 1255 ಬಹು–ರಾಜ್ಯ ಸಹಕಾರಿ ಸಂಸ್ಥೆಗಳು, 1560 ಪಟ್ಟಣ ಸಹಕಾರ ಬ್ಯಾಂಕುಗಳು, 91,000 ಕೃಷಿ ಪತ್ತಿನ ಸಹಕಾರ ಸಂಘಗಳು ಒಳಗೊಳ್ಳುತ್ತವೆ. ರೂ.3,83,285 ಮಿಲಿಯನ್‌ನಷ್ಟು ಷೇರು ಬಂಡವಾಳವನ್ನು ಸಹಕಾರಿ ಕ್ಷೇತ್ರ ಹೊಂದಿದೆ. ದೇಶದ ಶೇ.95% ಗ್ರಾಮಗಳಲ್ಲಿ ಅಂದರೆ 6.30 ಲಕ್ಷ ಗ್ರಾಮಗಳಲ್ಲಿ ಸಹಕಾರ ಕ್ಷೇತ್ರ ವ್ಯಾಪಿಸಿದೆ.
- ಸಹಕಾರ ಕ್ಷೇತ್ರ ದೇಶದ ಜನರ ಜೀವನ ಪದ್ಧತಿಯಾಗಿ ಬೆಳದಿದೆ. ಆಡು ಮುಟ್ಟದ ಸೊಪ್ಪಿಲ್ಲ, ರವಿ ಕಾಣದ ಸೊಬಗಿಲ್ಲ ಎಂಬಂತೆ ಸಹಕಾರ ಕ್ಷೇತ್ರ ವ್ಯಾಪಿಸದಿರುವ ಯಾವ ಕ್ಷೇತ್ರವು ಉಳಿದಿರುವುದಿಲ್ಲ.
- ಈ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ತಜ್ಞರು ವಿವರಿಸುವಂತೆ ಶೇ.40 ರಷ್ಟು ಪಾಲನ್ನು ಸಹಕಾರ ಕ್ಷೇತ್ರದ ಮೂಲಕವೇ ನಿರ್ವಹಿಸಲಾಗುತ್ತಿದೆ. ಸಹಕಾರಿ ಕ್ಷೇತ್ರದ ಮೂಲಕ ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ ಈ ಸಹಕಾರ ಕ್ಷೇತ್ರಕ್ಕೆ ಪರ್ಯಾಯ ವ್ಯವಸ್ಥೆ ಇನ್ನೂ ಆವಿಷ್ಕಾರವಾಗದಿರುವುದು ಸಹಕಾರಿ ಕ್ಷೇತ್ರದ ಅಗತ್ಯತೆ ಮತ್ತು ಹಿರಿಮೆ.
- ಈ ಕ್ಷೇತ್ರ ಇಷ್ಟೊಂದು ಬೃಹದಾಕಾರವಾಗಿ ಬೆಳೆದಿದ್ದರೂ, ಅನೇಕ ಸಾಧನೆಗಳನ್ನು ಮಾಡಿದಾಗ್ಯೂ ಈ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸಲು ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಇದುವರೆಗೂ ಇರಲಿಲ್ಲ. ಸಹಕಾರಿ ಕ್ಷೇತ್ರದ ತೊಂದರೆಗಳ ನಿವಾರಣೆಗೆ ಕೇಂದ್ರದ ಕೃಷಿ ಇಲಾಖೆಯ ಜೊತೆಗೆ ಕಾರ್ಯ ನಿರ್ವಹಿಸುತ್ತಿರುವ ಸಹಕಾರಿ ಮಂತ್ರಿಗಳನ್ನು ವಿನಂತಿಸಬೇಕಾಗಿತ್ತು. ದೇಶದ ಕೃಷಿ ಕ್ಷೇತ್ರ ಅತ್ಯಂತ ದೊಡ್ಡದಾಗಿರುವುದರಿಂದ ಕೃಷಿ ಸಚಿವಾಲಯವು ಸಹಕಾರಿ ಕ್ಷೇತ್ರದ ಕಡೆ ಗಮನಹರಿಸುವುದು ಸಾಧ್ಯವಾಗುತ್ತಿರಲಿಲ್ಲ.
- ಈ ದಿಶೆಯಲ್ಲಿ ರಾಷ್ಟ್ರದ ಸಹಕಾರ ಭಾರತಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಜಂಟಿಯಾಗಿ ದೇಶದ ಮಾನ್ಯ ಪ್ರಧಾನ ಮಂತ್ರಿಗಳಾದ ಆದರಣೀಯ ಶ್ರೀ ನರೇಂದ್ರ ಮೋದಿಯವರಿಗೆ ಮತ್ತು ಸಂಬಂಧಿಸಿದ ಮಂತ್ರಿಯವರಿಗೆ ಅನೇಕ ಬಾರಿ ಮನವಿಯನ್ನು ಸಲ್ಲಿಸಲಾಗಿತ್ತು ಈ ಮನವಿಯನ್ನು ಪುರಸ್ಕರಿಸಿದ ಮಾನ್ಯ ಪ್ರಧಾನ ಮಂತ್ರಿಗಳು ಸಹಕಾರಿ ಇಲಾಖೆಗೆ ಪ್ರತ್ಯೇಕ ಸಚಿವಾಲಯದ ರಚನೆಗೆ ಒಪ್ಪಿರುವುದು ರಾಷ್ಟ್ರೀಯ ಸಹಕಾರ ಭಾರತಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸತತ ಪ್ರಯತ್ನಕ್ಕೆ ಫಲ ನೀಡಿದಂತಾಗಿದೆ
- ಕೇಂದ್ರ ಸಚಿವ ಸಂಪುಟದ ವಿಸ್ತರಣೆಗೆ ಮುಂಚಿತವಾಗಿ ಮೋದಿ ಸರ್ಕಾರ ಮಂಗಳವಾರ ಪ್ರತ್ಯೇಕ ಸಚಿವಾಲಯವನ್ನು ರಚಿಸಿದೆ. ಹೊಸ ಸಚಿವಾಲಯಕ್ಕೆ 'ಸಹಕಾರ ಸಚಿವಾಲಯ' ಎಂದು ಹೆಸರಿಸಲಾಗಿದೆ. ಸರ್ಕಾರದ ಪ್ರಕಾರ, 'ಸಹಕರ್ ಸೆ ಸಮೃದ್ಧಿ' ದರ್ಶನವನ್ನು ಸಾಕಾರಗೊಳಿಸಲು ಸಹಕಾರ ಸಚಿವಾಲಯವನ್ನು ರಚಿಸಲಾಗಿದೆ.
- ಈ ಸಚಿವಾಲಯವು ದೇಶದಲ್ಲಿ ಸಹಕಾರಿ ಆಂದೋಲನವನ್ನು ಬಲಪಡಿಸಲು ಪ್ರತ್ಯೇಕ ಆಡಳಿತ, ಕಾನೂನು ಮತ್ತು ನೀತಿ ಚೌಕಟ್ಟುಗಳನ್ನು ಒದಗಿಸುತ್ತದೆ. ಮೂಲಗಳ ಪ್ರಕಾರ, ಹೊಸ ಖಾತೆಯ ಉಸ್ತುವಾರಿ ಸಚಿವರನ್ನು ಬುಧವಾರ ಹೆಸರಿಸುವ ಸಾಧ್ಯತೆಯಿದೆ.
- ಹೊಸ ಸಚಿವಾಲಯವು ಸಹಕಾರಿಗಳನ್ನು ನಿಜವಾದ, ಜನಾಆಧಾರಿತ ಚಳುವಳಿಯಂತೆ ತಳಮಟ್ಟದವರೆಗೆ ತಲುಪಲು ಸಹಾಯ ಮಾಡುತ್ತದೆ ಎಂದು ಮೂಲಗಳು ತಿಳಿಸಿವೆ. ದೇಶದಲ್ಲಿ, ಸಹಕಾರಿ ಆರ್ಥಿಕ ಲಾಭಗೊಳಿಸುವ' ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಮತ್ತು ಬಹು–ರಾಜ್ಯ ಸಹಕಾರಿ ಸಂಸ್ಥೆಗಳ (ಎಂಎಸ್‌ಸಿಎಸ್) ಅಭಿವೃದ್ಧಿಯನ್ನು ಶಕ್ತಗೊಳಿಸಲು ಈ ಸಚಿವಾಲಯವು ಕೆಲಸ ಮಾಡುತ್ತದೆ.

- ಸಮುದಾಯ ಆಧಾರಿತ ಅಭಿವೃದ್ಧಿ ಸಹಭಾಗಿತ್ವಕ್ಕೆ ಕೇಂದ್ರ ಸರ್ಕಾರ ತನ್ನ ಆಳವಾದ ಬದ್ಧತೆಯನ್ನು ಹೊಸ ಸಚಿವಾಲಯ ರಚಿಸುವ ಮೂಲಕ ಸೂಚಿಸಿದೆ. ಪ್ರತ್ಯೇಕ ಸಚಿವಾಲಯದ ರಚನೆಯು ಕೇಂದ್ರ ಬಜೆಟ್‌ನಲ್ಲಿ ಹಣಕಾಸು ಸಚಿವರು ನೀಡಿದ ಘೋಷಣೆಯನ್ನು ಸಹ ಪೂರೈಸಲಿದೆ ಎಂದು ಭಾವಿಸಿದೆ.
- ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ರಚನೆಯಿಂದಾಗಿ ಈ ದೇಶದ ಬೃಹತ್ ಪ್ರಮಾಣದ ಸಹಕಾರ ಚಳುವಳಿಗೆ ಕೇಂದ್ರದಲ್ಲಿ ನಮ್ಮ ಸಮಸ್ಯೆಗಳಿಗೆ ಸ್ಪಂದಿಸುವ, ಸಹಕಾರ ಕ್ಷೇತ್ರವನ್ನು ಆರೋಗ್ಯಕರವಾಗಿ ಮತ್ತು ಬಲಯುತವಾಗಿ ಬೆಳೆಸಲು ಒಬ್ಬರು ಸಚಿವರು ಇರುವುದರಿಂದ ಸಹಕಾರ ಕ್ಷೇತ್ರ ಹೆಚ್ಚು ಪರಿಣಾಮಕಾರಿ ಕಾರ್ಯ ನಿರ್ವಹಿಸಲಿದೆ ಎಂಬುದು ಸಹಕಾರ ಭಾರತೀಯ ಹಾಗೂ ಸಂಯುಕ್ತ ಸಹಕಾರಿಯ ಆಶಯವಾಗಿದೆ.
- ಕೇಂದ್ರದ ಈ ಐತಿಹಾಸಿಕ ನಿರ್ಣಯವನ್ನು ರಾಷ್ಟ್ರೀಯ ಸಹಕಾರಿ ಯೂನಿಯನ್ ಅಧ್ಯಕ್ಷರು, ಹಾಗೂ ರಾಷ್ಟ್ರ ಮಟ್ಟದ ಸಹಕಾರ ಮಹಾಮಂಡಳಿಗಳ ಅಧ್ಯಕ್ಷರು, ರಾಜ್ಯದ ಹಾಗೂ ರಾಷ್ಟ್ರದ ಹಿರಿಯ ಸಹಕಾರಿಗಳು ಸಂತೋಷದಿಂದ ಸ್ವಾಗತಿಸಿದ್ದಾರೆ.

ಈ ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡಿರುವ ದೇಶದ ನೆಚ್ಚಿನ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ರಾಷ್ಟ್ರದ ಹಾಗೂ ರಾಜ್ಯದ ಸಹಕಾರಿಗಳ ಹಾಗೂ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

## ಪತ್ರಿಕಾ ಗೋಷ್ಠಿ




**ಬೆಂಗಳೂರು :** ದೇಶದಲ್ಲಿ ಸಹಕಾರ ಕ್ಷೇತ್ರದ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಸಹಕಾರಿ ಆಂದೋಲನಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯ ಎಂಬ ನೂತನ ಸಚಿವಾಲಯವೊಂದನ್ನು ರಚನೆ ಮಾಡಿರುವ ಕುರಿತಂತೆ ಬೆಂಗಳೂರಿನ ಪತ್ರಿಕಾ ಭವನದಲ್ಲಿ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡುರಾವ್ ರವರು ಪತ್ರಿಕಾ ಗೋಷ್ಠಿಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಹಕಾರ ಭಾರತಿ ಬೆಂಗಳೂರು ನಗರ ಅಧ್ಯಕ್ಷರಾದ ಶ್ರೀ ಎಂ ಆರ್ ವೆಂಕಟೇಶ್ ರವರು, ಸಹಕಾರ ಭಾರತಿ ಬೆಂಗಳೂರು ಇದರ ಕಾರ್ಯದರ್ಶಿ ಶ್ರೀ ಕುಮಾರ್ ಮೂರ್ತಿ ರವರು ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಉಪಸ್ಥಿತರಿದ್ದರು.



**ಮೈಸೂರು :** ದೇಶದಲ್ಲಿ ಸಹಕಾರ ಕ್ಷೇತ್ರದ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಸಹಕಾರಿ ಆಂದೋಲನಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯ ಎಂಬ ನೂತನ ಸಚಿವಾಲಯವೊಂದನ್ನು ರಚನೆ ಮಾಡಿರುವ ಕುರಿತಂತೆ ಮೈಸೂರಿನ ಸರ್ಕಾರ ಭವನದಲ್ಲಿ ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ್ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್ ಇವರು ಪತ್ರಿಕಾ ಗೋಷ್ಠಿಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮೈಸೂರು ಹಾಗೂ ಕೊಡಗು ಸಂಸದರಾದ ಶ್ರೀ ಪ್ರತಾಪ ಸಿಂಹ, ಚಾಮರಾಜ ಕ್ಷೇತ್ರದ ಶಾಸಕರಾದ ಶ್ರೀ ನಾಗೇಂದ್ರ ಉಪಸ್ಥಿತರಿದ್ದರು.




**ಬೆಳಗಾವಿ :** ದೇಶದಲ್ಲಿ ಸಹಕಾರ ಕ್ಷೇತ್ರದ ಕಾರ್ಯ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ಸಹಕಾರಿ ಆಂದೋಲನಕ್ಕೆ ಮತ್ತಷ್ಟು ಬಲ ತುಂಬುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಸಹಕಾರ ಸಚಿವಾಲಯ ಎಂಬ ನೂತನ ಸಚಿವಾಲಯವೊಂದನ್ನು ರಚನೆ ಮಾಡಿರುವ ಕುರಿತಂತೆ ಬೆಳಗಾವಿಯ ಪತ್ರಿಕಾ ಭವನದಲ್ಲಿ ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಪತ್ರಿಕಾ ಗೋಷ್ಠಿಯನ್ನು ನಡೆಸುವ ಮೂಲಕ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀಕಾಂತ ಬರುವೆ ರವರು ಉಪಸ್ಥಿತರಿದ್ದರು.



## ಕರ್ನಾಟಕದ ನೂತನ ರಾಜ್ಯಪಾಲರಾಗಿ ಶ್ರೀ ತಾವರ್ ಚಂದ್ ಗೆಹ್ಲೋಟ್ ನೇಮಕ

ಕರ್ನಾಟಕದ 19ನೇ ನೂತನ ರಾಜ್ಯಪಾಲರಾಗಿ ಶ್ರೀ ತಾವರ್ ಚಂದ್ ಗೆಹ್ಲೋಟ್ ನೇಮಕವಾಗಿದ್ದಾರೆ. ಇವರು ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣದ ಸಚಿವರಾಗಿದ್ದರು ಹಾಗೂ ಮೂರು ಬಾರಿ ಮಧ್ಯಪ್ರದೇಶ ಶಾಸಕರಾಗಿ, ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. ಈಗ ರಾಜ್ಯಸಭೆಯ ಸದಸ್ಯರಾಗಿದ್ದಾರೆ. ಶ್ರೀಯುತರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಪರವಾಗಿ ಅಭಿನಂದನೆಗಳು.

# ಸಂಯುಕ್ತ ಸಹಕಾರಿಯ ಆನ್ ಲೈನ್ ತರಬೇತಿ ಕಾರ್ಯಕ್ರಮಗಳು

## ಬೆಳಗಾವಿ ವಿಭಾಗ

### ಸಮಾಲೋಚನಾ ಸಭೆಗಳು

**ಉತ್ತರಕನ್ನಡ ಹಾಗೂ ಗದಗ :** ದಿನಾಂಕ 01 ಜೂನ್ 2021 ರಂದು ಬೆಳಿಗ್ಗೆ 11:00 ಗಂಟೆಗೆ ಉತ್ತರಕನ್ನಡ ಹಾಗೂ ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್.ರವಿ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 140 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಉತ್ತರಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಟೆ ಹಾಗೂ ಗದಗ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು.

**ಧಾರವಾಡ ಹಾಗೂ ಹಾವೇರಿ :** ದಿನಾಂಕ 01 ಜೂನ್ 2021 ರಂದು ಮಧ್ಯಾಹ್ನ 3:00 ಗಂಟೆಗೆ ಧಾರವಾಡ ಹಾಗೂ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಬಿ.ಕಲಾಲ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 110 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಗದಗ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಹಾಗೂ ಹಾವೇರಿ ಜಿಲ್ಲಾ ಸಂಯೋಜಕಾದ ಶ್ರೀ ಕಲ್ಮೇಶ ಮುಡೆಕ್ಕನವರ ಇವರು ಉಪಸ್ಥಿತರಿದ್ದರು.

**ವಿಜಯಪುರ :** ದಿನಾಂಕ 02 ಜೂನ್ 2021 ರಂದು ಬೆಳಿಗ್ಗೆ 11:00 ಗಂಟೆಗೆ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ.ಉಪ್ಪಿನ್ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 151 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎನ್. ಇವರು ಉಪಸ್ಥಿತರಿದ್ದರು.

**ಬಾಗಲಕೋಟೆ :** ದಿನಾಂಕ 03 ಜೂನ್ 2021 ರಂದು ಬೆಳಿಗ್ಗೆ 11:00 ಗಂಟೆಗೆ ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 145 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ವಿಜಯಪುರ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪಸ್ಥಿತರಿದ್ದರು.

**ಬೆಳಗಾವಿ :** ದಿನಾಂಕ 18 ಜೂನ್ 2021 ರಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ರಾಮದುರ್ಗ, ಸವದತ್ತಿ, ಚನ್ನಮ್ಮನ ಕಿತ್ತೂರು ಹಾಗೂ ಖಾನಾಪೂರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು. ಸಭೆಯಲ್ಲಿ 184 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ ಬಸಣ್ಣವರ ಇವರು ಉಪಸ್ಥಿತರಿದ್ದರು.

ದಿನಾಂಕ 19 ಜೂನ್ 2021 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 255 ಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು.

ದಿನಾಂಕ 21 ಜೂನ್ 2021 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಬಾಗ, ಕಾಗವಾಡ ಮತ್ತು ನಿಪ್ಪಾಣಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ಭಾಗವಹಿಸಿದ್ದರು. ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 254 ಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ಇವರು ಉಪಸ್ಥಿತರಿದ್ದರು.

ದಿನಾಂಕ 22 ಜೂನ್ 2021 ರಂದು ಬೆಳಗಾವಿ ಗೋಕಾಕ ಮತ್ತು ಮೂಡಲಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿರುತ್ತದೆ. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ಭಾಗವಹಿಸಿದ್ದರು. ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಉಪಸ್ಥಿತರಿದ್ದರು ಸಭೆಯಲ್ಲಿ 165 ಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಡಿ. ಬೆಳವಿ ಇವರು ಉಪಸ್ಥಿತರಿದ್ದರು.

## ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ತರಬೇತಿ ಕಾರ್ಯಕ್ರಮ

**ಗದಗ ಮತ್ತು ಧಾರವಾಡ :** ದಿನಾಂಕ 09 ಜೂನ್ 2021 ರಂದು ಗದಗ ಮತ್ತು ಧಾರವಾಡ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 109 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ತರಬೇತಿ ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗರಾಜಯ್ಯ ಹೆಚ್.ಎಸ್. ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉಪನ್ಯಾಸ ನೀಡಿದರು.

**ಉತ್ತರಕನ್ನಡ :** ದಿನಾಂಕ 11 ಜೂನ್ 2021 ರಂದು ಉತ್ತರಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್–19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ

ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್.ರವಿ ಇವರು ಭಾಗವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಗಂಗಾರಾಮ ಕೋಳಾಪ್ಪೆ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 181 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ತರಬೇತಿ ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗರಾಜಯ್ಯ ಹೆಚ್. ಎಸ್. ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉಪನ್ಯಾಸ ನೀಡಿದರು.

**ವಿಜಯಪುರ** : ದಿನಾಂಕ 12 ಜೂನ್ 2021 ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಇವರು ಭಾಗವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಶಿವಕಾಂತ ಎನ್ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 135 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ತರಬೇತಿ ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗರಾಜಯ್ಯ ಹೆಚ್.ಎಸ್. ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉಪನ್ಯಾಸ ನೀಡಿದರು.

**ಬಾಗಲಕೋಟೆ** : ದಿನಾಂಕ 15 ಜೂನ್ 2021 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ ಇವರು ಭಾಗವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 183 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ತರಬೇತಿ ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗರಾಜಯ್ಯ ಹೆಚ್.ಎಸ್. ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉಪನ್ಯಾಸ ನೀಡಿದರು.

**ಹಾವೇರಿ** : ದಿನಾಂಕ 16 ಜೂನ್ 2021 ರಂದು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಬಿ.ಕಲಾಲ ಇವರು ಭಾಗವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಮುಡೆಕ್ಕನವರ. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 123 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ತರಬೇತಿ ಕಾರ್ಯಕ್ರಮದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಾಗರಾಜಯ್ಯ ಹೆಚ್. ಎಸ್. ಮಾನ್ಯ ಅಪರ ನಿಬಂಧಕರು(ನಿವೃತ್ತ) ಇವರು ಉಪನ್ಯಾಸ ನೀಡಿದರು.

**ಬೆಳಗಾವಿ** : ದಿನಾಂಕ 30 ಜೂನ್ 2021 ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ಆನ್‌ಲೈನ್ ಮುಖಾಂತರ "ಗೋ ಟು ಮೀಟಿಂಗ್ ಆ್ಯಪ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರು ವಹಿಸಿದ್ದರು. ತರಬೇತಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ವೃಷಭನಾಥ ಪರಪ್ಪನವರ ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 216 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ.

ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಹಾಗೂ ಕೋವಿಡ್-19 ನ ವಿಷಮ ಪರಿಸ್ಥಿತಿಯಲ್ಲಿ ಸಹಕಾರಿಗಳು ಮಿತವ್ಯಯದಲ್ಲಿ ಕಾರ್ಯನಿರ್ವಹಿಸುವ ವಿಧಾನಗಳು ವಿಷಯದ ಕುರಿತು ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಎ.ಸಿದ್ಧಾಂತಿ ಮಾನ್ಯ ನಿರ್ದೇಶಕರು(ನಿವೃತ್ತ), ಆರ್.ಐ.ಸಿ.ಎಂ. ಬೆಂಗಳೂರು ಇವರು ಉಪನ್ಯಾಸ ನೀಡಿದರು.

## ಆಡಳಿತ ಮಂಡಳಿ ಸಭೆ ಜರುಗಿಸುವ/ವಾರ್ಷಿಕ ಸಾಮಾನ್ಯ ಸಭೆ/ನಡವಳಿ ದಾಖಲಿಸುವ ಕುರಿತು ತರಬೇತಿ ಕಾರ್ಯಕ್ರಮ

**ಕೊಪ್ಪಳ ಜಿಲ್ಲೆ :** ದಿನಾಂಕ 28.05.2021 ರಂದು ಕಲಬುರಗಿ ಪ್ರಾಂತದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಆಡಳಿತ ಮಂಡಳಿ ಸಭೆ ಜರುಗಿಸುವ/ ವಾರ್ಷಿಕ ಸಾಮಾನ್ಯ ಸಭೆ/ನಡವಳಿ ದಾಖಲಿಸುವ ಕುರಿತು" ತರಬೇತಿಯನ್ನು ಆನ್‌ಲೈನ್ ಗೋಟು ಮೀಟಿಂಗ್ ಆಪ್ ಮೂಲಕ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲಬುರಗಿ ಪ್ರಾಂತದ ಜಂಟಿ ನಿಬಂಧಕರಾದ ಶ್ರೀ ಗೋಪಾಲ ಚೌವ್ಹಾಣ ಮತ್ತು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಬಿ.ಎ ಕೇಸರಿಮಠರವರು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನೇರವೇರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಇವರು ಆಗಮಿಸಿ ವಿಷಯದ ಕುರಿತು ಉಪನ್ಯಾಸ ನೀಡಿದರು. ತರಬೇತಿಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಪವನ ಎಮ್ ಆರ್ ಜಿಲ್ಲಾ ಸಂಯೋಜಕರು ನೇರೆವರಿಸಿದರು. ತರಬೇತಿಯಲ್ಲಿ 110 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆನ್‌ಲೈನ ತರಬೇತಿ ಕಾರ್ಯಕ್ರಮಗಳ ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಶ್ರೀದೇವಿ ನಿರ್ವಹಿಸಿದರು.

## ಕೋವಿಡ್-19 ಸಂದರ್ಭದಲ್ಲಿ ಸಹಕಾರಿಗಳ ಆರ್ಥಿಕ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

**ಕಲಬುರಗಿ ಜಿಲ್ಲೆ :** ದಿನಾಂಕ 28.05.2021 ರಂದು ಕಲಬುರಗಿ ಪ್ರಾಂತದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ ಕೋವಿಡ-19 ಸಂದರ್ಭದಲ್ಲಿ ಸಹಕಾರಿಗಳ ಆರ್ಥಿಕ ನಿರ್ವಹಣೆ ಕುರಿತು" ಆನ್‌ಲೈನ್ ಗೊಟು ಮಿಟಿಂಗ್ ಆಪ್‌ನ ಮೂಲಕ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ನೆರವೇರಿಸಿದರು. ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ವಹಿಸಿದ್ದರು. ಮುಖ್ಯತಿಥಿಗಳಾಗಿ ಕಲಬುರಗಿ ಪ್ರಾಂತದ ಜಂಟಿ ನಿಬಂಧಕರಾದ ಶ್ರೀ ಗೋಪಾಲ ಚವ್ಹಾಣ ಆಗಮಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನೆರವರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ. ವಿ ರವೀಂದ್ರನಾಥ ಸನ್ನದು ಲೆಕ್ಕರಿಶೋಧಕರು ಸಾಗರ ಶಿವಮೊಗ್ಗ, ಇವರು ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್ ಪಾಟೀಲರವರು ಹಾಗೂ ಆಡಳಿತ ಮಂಡಳಿ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಶ್ರೀ ಓಂಕಾರ ಧರಣೆ ಜಿಲ್ಲಾ ಸಂಯೋಜಕರು ನೇರೆವರಿಸಿದರು. ಈ ತರಬೇತಿಯಲ್ಲಿ 94 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆನಲೈನ್ ತರಬೇತಿ ಕಾರ್ಯಕ್ರಮಗಳ ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಸಿಂಧು ಸಿ.ಟಿ ನಿರ್ವಹಿಸಿದರು.

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ

**ಕೊಪ್ಪಳ :** ದಿನಾಂಕ 22.06.2021 ರಂದು ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ನಿರ್ದೇಶಕರುಗಳಿಗಾಗಿ ಆನ್‌ಲೈನ್ ಮೂಲಕ ಆಡಳಿತ ಪರಿಣಿತಿ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೇರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ನೇರವೆರಿಸಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರವರು ಮಾಡಿದರು. ಮುಖ್ಯ ಅತಿಥಿಗಳಾಗಿ ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಬಿ.ಎ ಕೇಸರಿಮಠ ಮತ್ತು ಕೊಪ್ಪಳ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಇವರುಗಳೂ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಬೆಳಗ್ಗಿನ ಅವಧಿಯಲ್ಲಿ ಶ್ರೀ ನಂದೀಶ ಹಿರೇಮಠರವರು (ಕಾರ್ಪೊರೇಟ್ ಟ್ರೇನರ್ ಬೆಂಗಳೂರು) ಸಹಕಾರಿಗಳ ವ್ಯವಹಾರ ಅಭಿವೃದ್ಧಿ ಕುರಿತು ಮಧ್ಯಾಹ್ನದ ಅವಧಿಯಲ್ಲಿ ಶ್ರೀ ಹೆಚ್ ಎಸ್ ನಾಗರಾಜಯ್ಯ ನಿವೃತ್ತ ಅಪರ ನಿಬಂಧಕರು ಬೆಂಗಳೂರು ಇವರು ಸಹಕಾರಿಗಳ ಅಭಿವೃದ್ಧಿಯಲ್ಲಿ ನಿರ್ದೇಶಕರ ಪಾತ್ರ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ 110 ಸಹಕಾರಿಗಳ ಪ್ರತಿನಿಧಿಗಳ ಭಾಗವಹಿಸಿದ್ದರು. ಆನ್‌ಲೈನ್ ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆ ಶ್ರೀಮತಿ ಸಿಂಧು ಇವರು ನಿರ್ವಹಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಪವನ್ ಎಮ್ ಆರ್ ಜಿಲ್ಲಾ ಸಂಯೋಜಕರು ನೇರವೆರಿಸಿದರು.

## ಸಮಾಲೋಚನಾ ಸಭೆಗಳು

**ಕೊಪ್ಪಳ :** ದಿನಾಂಕ 03.06.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರರವರ ನೇತೃತ್ವದಲ್ಲಿ ಆನ್‌ಲೈನ್ ಗೊಟು ಮಿಟಿಂಗ್ ಆಪ್‌ನ ಮೂಲಕ ಸಮಾಲೋಚನಾ ಸಭೆ ಆಯೋಜಿಸಲಾಗಿತ್ತು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರರವರು ಪ್ರಾಸ್ತವಿಕ ಮಾತಾನಾಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಕೊಪ್ಪಳ ಜಿಲ್ಲಾ ಸಂಯೋಜಕರು ನೆರವೆರಿಸಿದರು. ಕಾರ್ಯಕ್ರಮದಲ್ಲಿ 110 ಪ್ರತಿನಿಧಿಗಳು ಭಾಗವಹಿಸಿದ್ದರು. ಆನ್‌ಲೈನ್ ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಶ್ರೀದೇವಿ ನಿರ್ವಹಿಸಿದರು.

**ಕಲಬುರಗಿ, ಬೀದರ ಮತ್ತು ಯಾದಗಿರ :** ದಿನಾಂಕ 04.06.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ, ಬೀದರ ಮತ್ತು ಯಾದಗಿರ ಜಿಲ್ಲೆಗಳ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಶ್ರೀ ಸಂಜೀವ ಮಹಾಜನ ಹಾಗೂ ಶ್ರೀ ವೈ.ಟಿ ಪಾಟೀಲರವರ ನೇತೃತ್ವದಲ್ಲಿ ಆನ್‌ಲೈನ್ ಗೋಟು ಮಿಟಿಂಗ್ ಆಪ್‌ನ ಮೂಲಕ ಸಮಾಲೋಚನಾ ಸಭೆ ಆಯೋಜಿಸಲಾಗಿತ್ತು. ಪ್ರಾಸ್ತವಿಕ ನುಡಿಯನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೆರವೆರಿಸಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರರವರು ನೇರವೆರಿಸಿದರು. ಕಾರ್ಯಕ್ರಮದ ನಿರೂಪಣೆ ಓಂಕಾರ, ಕಲಬುರಗಿ ಜಿಲ್ಲಾ ಸಂಯೋಜಕರು ವಂದನಾರ್ಪಣೆಯನ್ನು ಶ್ರೀ ವೀರಶಟ್ಟಿ ಕೆ, ಬೀದರ ಜಿಲ್ಲಾ ಸಂಯೋಜಕರು ನೇರವೆರಿಸಿದರು. ಸಭೆಯಲ್ಲಿ ಕಲಬುರಗಿ ಮತ್ತು ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕಲಬುರಗಿ, ಬೀದರ ಮತ್ತು ಯಾದಗಿರ ಜಿಲ್ಲೆಯ ಒಟ್ಟು 158 ಪ್ರತಿನಿಧಿಗಳು ಭಾಗವಹಿಸಿದ್ದರು. ಆನ್‌ಲೈನ್ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಶ್ರೀದೇವಿ ಮತ್ತು ಪ್ರತಿಭಾ ಮಠ್ ಇವರು ನಿರ್ವಹಿಸಿರು.

**ರಾಯಚೂರು :** ದಿನಾಂಕ 05.06.2021 ರಂದು ಮಧ್ಯಾಹ್ನ 3.30 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ತಿಮ್ಮಯ್ಯಶೆಟ್ಟಿ ನೇತೃತ್ವದಲ್ಲಿ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಾಯಿತು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರರವರು ನೇರವೆರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ವೆಂಕಟೇಶ ರಾತೋಡ ಜಿಲ್ಲಾ ಸಂಯೋಜಕರು ನೇರವೆರಿಸಿದರು. ಸದರಿ ಸಭೆಯಲ್ಲಿ 138 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಳ್ಳಾರಿ ಮತ್ತು ವಿಜಯನಗರ :** ದಿನಾಂಕ 05.06.2021 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಇವರ ನೇತೃತ್ವದಲ್ಲಿ ಸಮಾಲೋಚನಾ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಪ್ರಾಸ್ತವಿಕ ನುಡಿಯನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನೇರವೆರಿಸಿದರು. ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರರವರು ನೇರವೆರಿಸಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ರವಿಕೂಮಾರ ಜಿಲ್ಲಾ ಸಂಯೋಜಕರು ನೆರವೆರಿಸಿದರು. ಸದರಿ ಸಭೆಯಲ್ಲಿ ಒಟ್ಟು 107 ಪ್ರತಿನಿಧಿಗಳು ಭಾಗವಹಿಸಿದ್ದರು. ಆನ್‌ಲೈನ್ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಶ್ರೀದೇವಿ ಮತ್ತು ಪ್ರತಿಭಾ ಮಠ್ ಇವರು ನಿರ್ವಹಿಸಿದರು.

### ಬೆಂಗಳೂರು ವಿಭಾಗ

## ಸಮಾಲೋಚನಾ ಸಭೆಗಳು

**ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ :** ದಿನಾಂಕ 09.06.2021 ರಂದು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹ ಕರುಗಳೊಂದಿಗೆ ಆನ್‌ಲೈನ್ ಮೂಲಕ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೇರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಸ್ವಾಗತ ಕೋರಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ರಾಜೇಶ್ ಕೆ.ಎಂ ಮತ್ತು ಅನಿಲ್ ಕುಮಾರ್ ಎಂ.

ಇವರು ನೆರವೇರಿಸಿದರು. ಸದರಿ ಸಭೆಯಲ್ಲಿ 177 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ :** ದಿನಾಂಕ 10.06.2021 ರಂದು ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳೊಂದಿಗೆ ಆನ್‌ಲೈನ್ ಮೂಲಕ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ, ಹಾಗೂ ಎ.ಆರ್. ಪ್ರಸನ್ನ ಕುಮಾರ್ ಇವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಸ್ವಾಗತ ಕೋರಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ನಟರಾಜ ಹಾಗೂ ಶಶಿಕುಮಾರ್ ಇವರು ನೆರವೇರಿಸಿದರು. ಸದರಿ ಸಭೆಯಲ್ಲಿ 190 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ :** ದಿನಾಂಕ 11.06.2021 ರಂದು ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳೊಂದಿಗೆ ಆನ್‌ಲೈನ್ ಮೂಲಕ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮಾನ್ಯ ನಿರ್ದೇಶಕರಾದ ಶ್ರೀ ಬಿ. ಗಂಗಾದರಯ್ಯ ಇವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೇರವೇರಿಸಿದರು. ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಸ್ವಾಗತ ಕೋರಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಕುಶಾಲ್ ಹೆಚ್.ಎಂ ಹಾಗೂ ಉಮೇಶ್ ಎ.ಎಸ್ ಇವರು ನೆರವೇರಿಸಿದರು. ಸದರಿ ಸಭೆಯಲ್ಲಿ 153 ಪ್ರತಿನಿಧಿಗಳು ಭಾಗವಹಿಸಿದ್ದರು.

## ಮೈಸೂರು ವಿಭಾಗ

## ಬಡ್ಡಿಯೇತರ ಆದಾಯದ ವಿಧಾನಗಳು ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು :** ಮೈಸೂರು ಪ್ರಾಂತದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯದ ವಿಧಾನಗಳು ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ: 17.06.2021 ಗುರುವಾರ ಬೆಳಿಗ್ಗೆ 10:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಮತ್ತು ಶ್ರೀ ಸದಾಶಿವ ಶೆಟ್ಟಿ, ಮಾನ್ಯ ವೃತ್ತಿಪರ ನಿರ್ದೇಶಕರು ಇವರು ಮುಖ್ಯ ಅತಿಥಿಗಳ ಭಾಷಣ ಮಾಡಿದರು. ನಂತರ ಶ್ರೀ ವೀರೇಶ್ ಹಿರೇಮಠ್, ಮುಖ್ಯಕಾರ್ಯನಿರ್ವಾಹಕರು ಇವರು ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯದ ವಿಧಾನಗಳು ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 240 ಸೌಹಾರ್ದ ಸಹಕಾರಿಗಳಿಂದ 251 ಪ್ರತಿನಿಧಿಗಳು ಭಾಗವಹಿಸಿದ್ದರು.

## ನೂತನ ಸೌಹಾರ್ದ ಸಹಕಾರಿಗಳಿಗೆ ವ್ಯವಹಾರ ಅಭಿವೃದ್ಧಿ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು :** ಮೈಸೂರು ಪ್ರಾಂತದ 2019-20 ಮತ್ತು 2020-21ರಲ್ಲಿ ನೋಂದಣಿಯಾಗಿರುವ ನೂತನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು/ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ವ್ಯವಹಾರ ಅಭಿವೃದ್ಧಿ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 25.06.2021 ಶುಕ್ರವಾರ ಬೆಳಿಗ್ಗೆ 10:30 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಮುಖ್ಯ ಅತಿಥಿಗಳಾಗಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ - 1997ರ ಆಶಯ - ಪ್ರಮುಖ ಅಂಶಗಳು ಕುರಿತು ಉಪನ್ಯಾಸ ನೀಡಿದರು. ನಂತರ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ, ಮಾನ್ಯ ಮಾಜಿ ಉಪಾಧ್ಯಕ್ಷರು, ಕೆ.ಡಿ.ಸಿ.ಸಿ ಬ್ಯಾಂಕ್ ಹಾಗೂ ಸಹಕಾರಿ ಶಿಕ್ಷಣ ತಜ್ಞರು ಇವರು ವ್ಯವಹಾರ ಅಭಿವೃದ್ಧಿ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 91 ಸೌಹಾರ್ದ ಸಹಕಾರಿಗಳಿಂದ 135 ಪ್ರತಿನಿಧಿಗಳು ಭಾಗವಹಿಸಿದ್ದರು.

# "ಒಕ್ಕೂಟಗಳ ಕಾರ್ಯಯೋಜನೆ ಮತ್ತು ಬಲವರ್ಧನೆ" ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು :** ದಿನಾಂಕ: 02.06.2021 ರಂದು ಮೈಸೂರು ಪ್ರಾಂತದ ಒಕ್ಕೂಟ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ ಬೆಳಿಗ್ಗೆ 10:30 ರಿಂದ 01:00 ರವರೆಗೆ "ಒಕ್ಕೂಟಗಳ ಕಾರ್ಯಯೋಜನೆ ಮತ್ತು ಬಲವರ್ಧನೆ" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್ ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ|| ಕೆ.ಆರ್ ಹುಲ್ಲನಾಚೆ ಗೌಡ, ಖ್ಯಾತ ಸಾವಯವ ಕೃಷಿ ವಿಜ್ಞಾನಿ ಇವರು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ ಉಪಸ್ಥಿತರಾಗಿ ಶ್ರೀ ಸುರೇಶ್ ರೈ, ಶ್ರೀ ಭಾಸ್ಕರ್ ಕಾಮತ್ ಮತ್ತು ಶ್ರೀ ನಾರಾಯಣ್ ರಾವ್ ಉಪಸ್ಥಿತರಿದ್ದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 81 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

ದಿನಾಂಕ 12.06.2021 ರಂದು ಮೈಸೂರು ಪ್ರಾಂತದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಾಹಕ–ರಿಗೆ ಬೆಳಿಗ್ಗೆ 10.30 ರಿಂದ 01:00 ರವರೆಗೆ "ಸೌಹಾರ್ದ ಸಹಕಾರಿಗಳ ಕಾರ್ಯಯೋಜನೆ ಮತ್ತು ಬಲವರ್ಧನೆ" ಕುರಿತು ತರಬೇತಿಯನ್ನು ಗೋ–ಟು ಮೀಟಿಂಗ್ ಆನ್ ಲೈನ್ ಮೂಲಕ ಹಮ್ಮಿಕೊಳ್ಳಲಾಯಿತು. ಸದರಿ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಡಾ|| ಕೆ.ಆರ್ ಹುಲ್ಲನಾಚೆ ಗೌಡ, ಖ್ಯಾತ ಸಾವಯವ ಕೃಷಿ ವಿಜ್ಞಾನಿ ಇವರು ಉಪನ್ಯಾಸ ನೀಡಿದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 231 ಪ್ರತಿನಿಧಿಗಳು ಭಾಗವಹಿಸಿದ್ದರು. ಸದರಿ ತರಬೇತಿಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ, ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಮತ್ತು ಪ್ರಾಂತೀಯ ವ್ಯವಸ್ಥಾಪಕರು, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

# ಸಮಾಲೋಚನಾ ಸಭೆಗಳು

**ಉಡುಪಿ ಮತ್ತು ಹಾಸನ :** ದಿನಾಂಕ 07 ಜೂನ್ 2021 ರಂದು ಬೆಳಿಗ್ಗೆ 11:00 ಗಂಟೆಗೆ ಉಡುಪಿ ಮತ್ತು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ಉಪಸ್ಥಿತರಿದ್ದರು ಸಭೆಯಲ್ಲಿ 191 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಹಾಗೂ ಹಾಸನ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ.ಜೆ ಇವರು ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು :** ದಿನಾಂಕ 07 ಜೂನ್ 2021 ರಂದು ಮಧ್ಯಾಹ್ನ 3.30 ಗಂಟೆಗೆ ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್ ಮತ್ತು ಶ್ರೀ ಮಂಜುನಾಥ್ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ಉಪಸ್ಥಿತರಿದ್ದರು ಸಭೆಯಲ್ಲಿ 230 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಚಿಕ್ಕಮಗಳೂರು ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ.ಜೆ ಇವರು ಉಪಸ್ಥಿತರಿದ್ದರು.

**ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ :** ದಿನಾಂಕ 08 ಜೂನ್ 2021 ರಂದು ಬೆಳಿಗ್ಗೆ 11:00 ಗಂಟೆಗೆ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಬೋಳ ಇವರು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ ಉಪಸ್ಥಿತರಿದ್ದರು ಸಭೆಯಲ್ಲಿ 102 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿರುತ್ತಾರೆ. ಸಭೆಯಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ್ ಆರ್. ಎಸ್ ಹಾಗೂ ಮಂಡ್ಯ, ಚಾಮರಾಜನಗರ ಜಿಲ್ಲಾ ಸಂಯೋಜಕರಾದ ಶ್ರೀ ಚಂದರಶೇಖರಯ್ಯ ಎಂ ಇವರು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿಗಳ ಇ-ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಯವರಿಗೆ ತರಬೇತಿ ಕಾರ್ಯಕ್ರಮ

ಸಂಯುಕ್ತ ಸಹಕಾರಿಯಿಂದ ಅನುಮತಿ ಪಡೆದ ಸದಸ್ಯ ಸಹಕಾರಿಗಳು, ರಾಜ್ಯದೆಲ್ಲಡೆ 1,390ಕ್ಕೂ ಹೆಚ್ಚು ಇ–ಸ್ಟಾಂಪಿಂಗ್ ಕೇಂದ್ರಗಳನ್ನು ಹೊಂದಿರುತ್ತದೆ. ಈ ಸದಸ್ಯ ಸಹಕಾರಿಯ ಎಸಿಸಿ ಕೇಂದ್ರಗಳ ಸಿಬ್ಬಂದಿಗಳಿಗೆ ಪ್ರತಿ 2 ವರ್ಷಕ್ಕೊಮ್ಮೆ ಸಂಯುಕ್ತ ಸಹಕಾರಿಯು ಇ–ಸ್ಟಾಂಪಿಂಗ್ ಕುರಿತು ತರಬೇತಿಗಳನ್ನು ಆಯೋಜಿಸುತ್ತಾ ಬಂದಿರುತ್ತದೆ. ಆದರೆ ಕೋವಿಡ್–19 2ನೇ ಅಲೆ ಹಿನ್ನೆಲೆಯಲ್ಲಿ ಆಫ್‌ಲೈನ್ ತರಬೇತಿ ನೀಡುವುದು ಸಾಧ್ಯವಾಗದಿರುವುದರಿಂದ, ಇ–ಸ್ಟಾಂಪ್ ಕೇಂದ್ರಗಳ ಮೇಲ್ವಿಚಾರಕ (Supervisor) ಮತ್ತು ಬಳಕೆದಾರ (User) ಗಳಿಗೆ ತಾಂತ್ರಿಕವಾಗಿ ತರಬೇತಿ ನೀಡುವುದು ಅವಶ್ಯಕವಾಗಿರುವುದರಿಂದ ಸದರಿ ಕಾರ್ಯಕ್ರಮವನ್ನು (ಆನ್‌ಲೈನ್) ಮೂಲಕ ನಡೆಸಲು ಸಂಯುಕ್ತ ಸಹಕಾರಿ ನಿರ್ಧರಿಸಿದೆ.

ದಿನಾಂಕ: 12–07–2021 ರಿಂದ 23–07–2021 ರವರೆಗೆ ಮಧ್ಯಾಹ್ನ 3 ಗಂಟೆಯಿಂದ 5.30ರವರೆಗೆ Goto Meeting App ಬಳಸಿ ಇ–ಸ್ಟಾಂಪಿಂಗ್ ವಿಷಯಗಳ ಕುರಿತು ತರಬೇತಿಯನ್ನು ಆಯೋಜಿಸಿರುತ್ತದೆ. ಈ ತರಬೇತಿಯಲ್ಲಿ ಇ–ಸ್ಟಾಂಪ್ ಎಸಿಸಿ ಕೇಂದ್ರಗಳ ದಿನ ನಿತ್ಯದ ಕಾರ್ಯಗಳು, ಪ್ರಾಯೋಗಿಕ ತೊಂದರೆಗಳ ಬಗ್ಗೆ, ತಾಂತ್ರಿಕ ಮಾಹಿತಿ ಹಾಗೂ ಇ–ಸ್ಟಾಂಪ್ ಆರ್ಟಿಕಲ್ಸ್ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುತ್ತದೆ. ಆದ್ದರಿಂದ ಎಲ್ಲ ಇ–ಸ್ಟಾಂಪ್ ಎಸಿಸಿ ಕೇಂದ್ರಗಳ ಸಿಬ್ಬಂದಿಗಳು ತಮಗೆ ನೀಡುವ ಮೀಟಿಂಗ್ ಐಡಿಗಳನ್ನು ಬಳಸಿ, ಕಡ್ಡಾಯವಾಗಿ ಈ ಉಪಯುಕ್ತವಾದ ತರಬೇತಿಯಲ್ಲಿ ಭಾಗವಹಿಸಿ ತರಬೇತಿಯ ಪೂರ್ಣ ಪ್ರಯೋಜನ ಪಡೆಯಲು ತಿಳಿಸಿದೆ.

| ಕ್ರ. ಸಂ | ದಿನಾಂಕ | ಜಿಲ್ಲೆಗಳು | ಎಸಿಸಿ ಕೇಂದ್ರಗಳ ಸಂಖ್ಯೆ | ಗೊಟು ಮೀಟಿಂಗ್ ಐಡಿ |
|---|---|---|---|---|
| 1 | 12–07–2021 | ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು, ಉಡುಪಿ, ಚಿಕ್ಕಮಂಗಳೂರು | 124 | 263970501 |
| 2 | 13–07–2021 | ಬೆಂಗಳೂರು | 172 | 456035005 |
| 3 | 14–07–2021 | ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ದಾವಣಗೆರೆ, ಶಿವಮೊಗ್ಗ | 124 | 201825461 |
| 4 | 15–07–2021 | ಚಿತ್ರದುರ್ಗ, ರಾಯಚೂರು, ಗದಗ | 125 | 740565013 |
| 5 | 16–07–2021 | ದಕ್ಷಿಣ ಕನ್ನಡ, ತುಮಕೂರು | 122 | 773494773 |
| 6 | 17–07–2021 | ಕಲಬುರಗಿ, ಬಳ್ಳಾರಿ, ವಿಜಯನಗರ, ಯಾದಗಿರಿ, ಬೀದರ | 132 | 988001117 |
| 7 | 19–07–2021 | ಬೆಳಗಾವಿ | 194 | 719457437 |
| 8 | 20–07–2021 | ಉತ್ತರ ಕನ್ನಡ, ಹಾವೇರಿ, ಮೈಸೂರು | 125 | 938136997 |
| 9 | 22–07–2021 | ಬಾಗಲಕೋಟೆ, ಹುಬ್ಬಳ್ಳಿ, ಧಾರವಾಡ | 125 | 597281549 |
| 10 | 23–07–2021 | ವಿಜಯಪುರ, ಕೊಪ್ಪಳ | 129 | 725636645 |

# ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ..ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 2 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 3 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 4 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 5 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 6 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 7 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/– |
| 8 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/– |
| 9 | Special Co-opearative Societies of Karnataka | 25/– |
| 10 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 11 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 12 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 13 | Karnataka High Court Judgements Related to Co-operative Sector | 200/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 15 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 16 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 17 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/– |
| 18 | Karnataka High Court Judgements Related to Co-operative Sector Vol -2 | 400/– |
| 19 | Supreme Court Judgement Related to Co-operative Sector Volume - 1 | 150/– |
| 20 | Supreme Court Judgement Related to Co-operative Sector Volume - 2 | 500/– |
| 21 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 22 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 23 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 24 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 25 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 26 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 27 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 28 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 29 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ರಾಜ್ಯದಲ್ಲಿ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಕುರಿತು ಸುತ್ತೋಲೆ

ಸಹಕಾರಚುನಾವಣಾ ಪ್ರಾಧಿಕಾರ,
ಟಿ.ಟಿ.ಎಂ.ಸಿ.ಕಟ್ಟಡ, 3ನೇಮಹಡಿ, ಶ್ರೀ ಕೆಂಗಲ್ ಹನುಮಂತಯ್ಯರಸ್ತೆ, ಶಾಂತಿನಗರ, ಬೆಂಗಳೂರು–560027.

e-mail : coeckarnataka@gmail.com
Phone : 080-22220066 / 29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/ 6(2) /ಸುತ್ತೋಲೆ/2021 ದಿನಾಂಕ 21.06.2021

**ಚುನಾವಣಾ ತುರ್ತು**

## ಸುತ್ತೋಲೆ

ವಿಷಯ : ರಾಜ್ಯದಲ್ಲಿ ಕೊರೋನಾ ವೈರಸ್ ಹರಡದಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ :
1) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/6(1)/ಸುತ್ತೋಲೆ/2021 ದಿನಾಂಕ 26.04.2021.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿಒ.29. ಸಿಎಲ್ಎಂ.2021 ದಿನಾಂಕ 18.06.2021.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್–19) ಸಾಂಕ್ರಾಮಿಕವಾಗಿ ಹರಡುತ್ತಿದ್ದ ಹಿನ್ನಲೆಯಲ್ಲಿ ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಚುನಾವಣೆ ನಡೆಸಲು ಬಾಕಿ ಇದ್ದ ಎಲ್ಲಾ ವಿಧದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 5–ಎಂ ಗಳಂತೆ ಸಹಕಾರ ಚುನಾವಣಾ ಪ್ರಾಧಿಕಾರಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಚುನಾವಣೆಗಳನ್ನು ಮುಂದೂಡಲಾಗಿತ್ತು.

ಆದರೆ, ಸದರಿ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡು ಕೆಲವು ಜಿಲ್ಲೆಗಳ ಚುನಾವಣಾಧಿಕಾರಿಗಳಿಂದ ಖಾಲಿ ಬಿದ್ದ ಪದಾಧಿಕಾರಿಗಳ (ಅಧ್ಯಕ್ಷರು / ಉಪಾಧ್ಯಕ್ಷರು) ಚುನಾವಣೆಗಳನ್ನು ನಡೆಸುವ ಬಗ್ಗೆ ಹಾಗೂ ಹೊಸದಾಗಿ ನೊಂದಣಿಯಾದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು ಸ್ಪಷ್ಟೀಕರಣ ಕೋರುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ

ಆದ್ದರಿಂದ, ಎಲ್ಲಾ ಚುನಾವಣಾಧಿಕಾರಿಗಳಿಗೆ ಮತ್ತು ರಿಟರ್ನಿಂಗ್ ಅಧಿಕಾರಿಗಳಿಗೆ ಈ ಮೂಲಕ ಸ್ಪಷ್ಟೀಕರಿಸುವುದೇನೆಂದರೆ, ಉಲ್ಲೇಖ(2)ರ ಪತ್ರದಲ್ಲಿ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಕಾರಣ ರಾಜ್ಯದಲ್ಲಿರುವ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ದಿನಾಂಕ 26.04.2021ರ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಹಾಗೂ ಉಪ ಚುನಾವಣೆಗಳನ್ನು ಮತ್ತು ಸದರಿ ಸಂಸ್ಥೆಗಳ (ಅಧ್ಯಕ್ಷರು / ಉಪಾಧ್ಯಕ್ಷರು / ನಿರ್ದೇಶಕರ) ಖಾಲಿ ಬಿದ್ದ ಸ್ಥಾನಗಳ ಚುನಾವಣೆಗಳನ್ನು ಸಹಾ ಮುಂದಿನ 6 ತಿಂಗಳ ಅವಧಿಗೆ ಮುಂದೂಡಲು ನಿರ್ಣಯಿಸಿ ಮೇಲಿನ ಉಲ್ಲೇಖದಂತೆ ಈ ಪ್ರಾಧಿಕಾರಕ್ಕೆ ಸಚಿವ ಸಂಪುಟದ ತೀರ್ಮಾನದಂತೆ ಕ್ರಮ ಕೈಗೊಳ್ಳಲು ತಿಳಿಸಲಾಗಿರುತ್ತದೆ.

ಆದ್ದರಿಂದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು / ಉಪ ಚುನಾವಣೆಗಳನ್ನು ಮತ್ತು ಸದರಿ ಸಂಸ್ಥೆಗಳ (ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರ) ಖಾಲಿ ಬಿದ್ದ ಸ್ಥಾನಗಳನ್ನೊಳಗೊಂಡಂತೆ ಎಲ್ಲಾ ಚುನಾವಣೆಗಳನ್ನು ದಿನಾಂಕ 26.04.2021 ರಿಂದ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲಾಗಿರುತ್ತದೆ ಎಂದು ಸ್ಪಷ್ಟೀಕರಿಸಲಾಗಿದೆ.

(ಡಾ: ಎನ್.ಎಸ್.ಚನ್ನಪ್ಪಗೌಡ)
ಆಯುಕ್ತರು,
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು–27.

# ಕೊರೋನಾ ಲಾಕ್‌ಡೌನ್ ಹಿನ್ನಲೆಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಹಾಯ ಹಸ್ತ

## ಕನಕದಾಸ ಪತ್ತಿನ ಸೌಹಾರ್ದ ಸಹಕಾರಿಯಿಂದ ಊಟದ ವ್ಯವಸ್ಥೆ



**ಹನಮಸಾಗರ** : ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ಹನಮಸಾಗರ ಸಹಕಾರಿ ವತಿಯಿಂದ ಹನಮಸಾಗರ ಕೋವಿಡ್–19 ಕೇರ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋಂಕಿತರಿಗೆ ಒಂದು ದಿನದ ಊಟದ ವ್ಯವಸ್ಥೆ ಹಮ್ಮಿಕೊಂಡಿತ್ತು. ಕೋವಿಡ ಸೋಂಕಿತರಿಗೆ ಮತ್ತು ಅಲ್ಲಿ ಕೆಲಸ ಮಾಡುವ ಸಿಬ್ಬಂದಿಯವರಿಗೆ ಸಹಕಾರಿ ವತಿಯಿಂದ ಊಟದ ವ್ಯವಸ್ಥೆ ಮಾಡಲಾಗಿತ್ತು.

ಸಾಮಾಜಿಕ ಕಳಕಳಿ & ಮಾನವತಾ ದೃಷ್ಟಿಯಿಂದ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನಮಂತಪ್ಪ ಬಿಂಗಿ, ಉಪಾಧ್ಯಕ್ಷರಾದ ಶ್ರೀ ನಾಗರಾಜ ಹಕ್ಕಿ, ಸಹಕಾರಿಯ ಸಿ.ಇ.ಓ ಶ್ರೀ ದ್ಯಾಮಣ್ಣ ಬಿಂಗಿ ಹಾಗೂ ಹನಮಸಾಗರ ವೈಧ್ಯಾಧಿಕಾರಿಗಳಾದ ಶ್ರೀ ವಿನಾಯಕ ಪಟ್ಟಣಶೆಟ್ಟಿ, ಕುಷ್ಟಗಿ ವೃತ ಸಿ.ಪಿ.ಐ ನಿಂಗಪ್ಪ ಆರ್, ಪಿ.ಎಸ್.ಐ ಅಶೋಕ ಬೇವೂರ ಗ್ರಾಮ ಪಂಚಾಯತ ಪಿ.ಡಿ.ಓ ನಿಂಗಪ್ಪ ಮೂಲಿಮನಿ ಸೋಂಕಿತರಿಗೆ ಊಟ ವಿತರಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹನಮಂತಪ್ಪ ಬಿಂಗಿ ಮಾತನಾಡಿ ಸೋಂಕಿತರಿಗೆ ಆರೋಗ್ಯ ವಿಚಾರಿಸಿ ಅವರಿಗೆ ಆತ್ಮಸ್ಥೆರ್ಯ ತುಂಬಿ ಬೇಗನೆ ಗುಣಮುಖರಾಗಿ ಮನೆಗೆ ಹಿಂದುರಿಗಿ ಎಂದು ಹಾರೈಸಿದರು. ಉಪಾಧ್ಯಕ್ಷರಾದ ಶ್ರೀ ನಾಗರಾಜ ಹಕ್ಕಿ, ಶ್ರೀ ಬಸವರಾಜ ಅಕ್ಕಿ, ಶ್ರೀ ಭರಮಪ್ಪ ಬಿಂಗಿ, ಅಂದಾನಪ್ಪ ಬಿಂಗಿ, ಶ್ರೀ ಹಿರಗಪ್ಪ ಗಡೇಕಾರ, ಶ್ರೀ ಶಂಕ್ರಪ್ಪ ಬಾಗಲಿ, ಶ್ರೀ ಶ್ರೀಕಾಂತ ಕೊಳ್ಳೂರ, ಶ್ರೀ ಶಿವಪ್ಪ ವಾಲ್ಮೀಕಿ, ಶ್ರೀ ಬಸಪ್ಪ ಕಿಲ್ಲೇದ, ಶ್ರೀಮತಿ ಗೀತಾ ಸೋಪ್ಪಿಮಠ ಶ್ರೀಮತಿ ಪಾರ್ವತಿ ಚೌಡಾಪೂರ, ಶ್ರೀಮತಿ ಗಂಗಮ್ಮ ಹಕ್ಕಿ ಕೇಂದ್ರ ಕಛೇರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ದ್ಯಾಮಣ್ಣ ಬಿಂಗಿ, ಹೂಲಗೇರಾ ಶಾಖಾ ವ್ಯವಸ್ಥಾಪಕರಾದ ಶ್ರೀ ಅಮೀನಸಾಬ ಕಲಾದಗಿ, ದೋಟಿಹಾಳ ಶಾಖಾ ವ್ಯವಸ್ಥಾಪಕರಾದ ಶ್ರೀ ಮುತ್ತಪ್ಪ ಬಿಂಗಿ. ಸಿಬ್ಬಂದಿಯವರಾದ ಶ್ರೀಮತಿ ಮಲ್ಲಮ್ಮ ವಡಗೇರಿ. ಶ್ರೀಮತಿ ಶ್ರೀದೇವಿ ಅಂಗಡಿ, ಆನಂದ ಅಮ್ಮನಗದ್ದಿ, ದೂಡ್ಡಪ್ಪ ಕಿಲ್ಲೇದ ಪಿಗ್ಮಿ ಸಂಗ್ರಹಕರಾದ ರಾಘವೇಂದ್ರ ನಾಲಗಾರ, ಉಮೇಶ ಹುಡೇದ, ಬಸವರಾಜ ಚೌಡಾಪೂರ, ಅಶೋಕ ಕುಂಕದ, ಸಿದ್ದಪ್ಪ ಕಿಲ್ಲೇದ ಇತರರು ಉಪಸ್ಥಿತರಿದ್ದರು.

## ಆಹಾರ ಕಿಟ್ ವಿತರಣೆ



**ಗೌರಿಬಿದನೂರು** : ಶ್ರೀ ಕನ್ನಿಕಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಗೌರಿಬಿದನೂರು ವತಿಯಿಂದ ಗೌರಿಬಿದನೂರು ತಾಲ್ಲೂಕಿನ ಬೈಚಾಪುರ, ಕೋನಾಪುರ, ಗೊಟಕನಾಪುರ ಮತ್ತು ಪುಟ್ಟಾಪುರ್ಲಹಳ್ಳಿಯ ಬಡವರ್ಗದ 100 ಕುಟುಂಬಗಳಿಗೆ ಆಹಾರ ಕಿಟ್ ವಿತರಿಸಲಾಯಿತು.



**ಯರಗಟ್ಟಿ** : ಶ್ರೀ ಕಟಕೋಳ ಸಿದ್ದರಾಯಜ್ಜನವರ ಸೌಹಾರ್ದ ಸಹಕಾರಿ ನಿಯಮಿತ ಯರಗಟ್ಟಿ ವತಿಯಿಂದ ಸಹಕಾರಿ ಸಿಬ್ಬಂದಿಗಳಿಗೆ ಹಾಗೂ ಗ್ರಾಹಕರಿಗೆ ಸಹಕಾರಿ ವತಿಯಿಂದ ಸ್ಟೀಮ್ ಮಷೀನ್ ಮತ್ತು ಆಹಾರದ ಕಿಟ್ ವಿತರಿಸಲಾಯಿತು.



**ಚಿತ್ರದುರ್ಗ** : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿತ್ರದುರ್ಗ ಇವರ ಸಹಯೋಗದೊಂದಿಗೆ ದಿನಾಂಕ 09.06.2021 ರಂದು ವಾಸವಿ ಮಹಲ್ ನಲ್ಲಿ ಬೆಳಗ್ಗೆ 10.30 ಕ್ಕೆ ಆರ್ಯವೈಶ್ಯ ಸಂಘ ಮತ್ತು ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ, ಚಿತ್ರದುರ್ಗ ಇವರು ಕೋವಿಡ್ ಲಸಿಕಾ ಶಿಬಿರವನ್ನು ನಗರದ ವಾಸವಿಮಹಲ್ ನಲ್ಲಿ ಆಯೋಜಿಸಿದ್ದು, ಇದರ ಉದ್ಘಾಟನೆಯನ್ನು ಶಾಸಕರಾದ ಸನ್ಮಾನ್ಯ ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿಯವರು ನೆರವೇರಿಸಿದರು. ಉದ್ಘಾಟನಾ ಭಾಷಣವನ್ನು ಮಾಡುತ್ತಾ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿಯವರು 2ನೇ ಅಲೆಯಿಂದಾಗಿ ಬಹಳಷ್ಟು ಜನರು ಪ್ರಾಣವನ್ನು ತೆತ್ತಿದ್ದಾರೆ. ಈ ಸಂದರ್ಭದಲ್ಲಿ ಲಸಿಕೆಯು ಜನತೆಗೆ ತುಂಬಾ ಅನಿವಾರ್ಯವಾಗಿದೆ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಯುತ ಟಿ. ಬದರಿನಾಥ್, ಆರ್ಯವೈಶ್ಯ ಸಂಘದ ಉಪಾಧ್ಯಕ್ಷರಾದ ಎಂ.ಆರ್. ಸಂಜೀವಶೆಟ್ಟಿ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಎಲ್.ಆರ್.ವೆಂಕಟೇಶ್ ಕುಮಾರ್ ರವರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜ ಶೆಟ್ಟಿ ಮತ್ತು ಕಾರ್ಯಕಾರಿ ಸಮಿತಿಯವರು ಉಪಸ್ಥಿತರಿದ್ದರು.



**ಕೊಪ್ಪಳ** : ಕಾರಟಗಿ ನಗರದಲ್ಲಿ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕು ಸೌಹಾರ್ದ ಸಹಕಾರಿ ಒಕ್ಕೂಟ ಇವರ ಸಂಯುಕ್ತ ಆಶ್ರಯದಲ್ಲಿ ವಿದ್ಯಾ ಭಾರತಿ ಪದವಿ ಕಾಲೇಜು ಆವರಣದಲ್ಲಿ ಗುರು ಬಂಧು ಯೋಜನೆ ಕಾರ್ಯಕ್ರಮದಲ್ಲಿ ಖಾಸಗಿ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಆರ್ಥಿಕ ಸಂಕಷ್ಟದಲ್ಲಿರುವ 60 ಜನ ಶಿಕ್ಷಕರಿಗೆ ಆಹಾರ ಕಿಟ್ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಗುಂಡಪ್ಪ ಕುಳಗಿ ಅಧ್ಯಕ್ಷರು ಡಾ। ಪುಟ್ಟರಾಜ ಸೌಹಾರ್ದ ಸಹಕಾರಿ ನಿ., ಮುಖ್ಯ ಅತಿಥಿಗಳಾಗಿ ಶ್ರೀಧರ ಕೆಸರಟ್ಟಿ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ನಿ., ಬೆಂಗಳೂರು. ರಮೇಶ್ ಒ, ಜಿಲ್ಲಾ ಸೌಹಾರ್ದ ಒಕ್ಕೂಟ ದ ನಿರ್ದೇಶಕರು, ಹಾಗೂ ಸಿದ್ದನಗೌಡ ಕೆ ಅಧ್ಯಕ್ಷರು ಸಂಕೇತ ಸೌಹಾರ್ದ ಸಹಕಾರಿ, ಶ್ರೀ ರಾಮಾಂಜನೇಯ ಶ್ರೀಕೆರೆ ಬಸವೇಶ್ವರ ಕಾಲೇಜು ಪ್ರಾಂಶುಪಾಲರು, ವಿರೇಶ ಬೂದಗುಂಪ ವಿದ್ಯಾ ಭಾರತಿ ಪದವಿ ಕಾಲೇಜು ಪ್ರಾಂಶುಪಾಲರು ಹಾಗೂ ಮತ್ತೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯ ಶಿಕ್ಷಕರಾದ ಶ್ರೀ ಸಿದ್ದಲಿಂಗಪ್ಪ ಹಂಚಿನಾಳ ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು

ಈ ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರಾದ ಶ್ರೀ ಸಿದ್ದಲಿಂಗಪ್ಪ ಹಂಚಿನಾಳ ಇವರಿಗೆ ಸಹಕಾರಿಗಳಿಂದ ಸನ್ಮಾನಿಸಲಾಯಿತು. ಪ್ರಾರ್ಥನೆ ಶ್ರೀಮತಿ ಸುಧಾ ಇವರಿಂದ ಹಾಗೂ ಬಸವರಾಜ ಕೂಡ್ಲೂರ ಪ್ರಾಸ್ತಾವಿಕ ಭಾಷಣ ಮಾಡಿದರು ಕಾರ್ಯಕ್ರಮವನ್ನು ಬಸವರಾಜ ಹೊಸಮನಿ ಶಿಕ್ಷಕರು ನಿರೂಪಿಸಿದರು.



**ಮೈಸೂರು** : ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ನಿಯಮಿತ ಮತ್ತು ಮಹಾನಗರದ ಪಾಲಿಕೆ ಸಂಯುಕ್ತಾಶ್ರಯದಲ್ಲಿ ದಿನಾಂಕ 12.06.2021ರಂದು ಕರೋನಾ ಸಂಕಷ್ಟದಿಂದ ಆರ್ಥಿಕವಾಗಿ ತೊಂದರೆಯಲ್ಲಿರುವ 100 ಜನ ಸಹಕಾರಿಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಹಚ್.ಎನ್ ನವೀನ್, ಉಪಾಧ್ಯಕ್ಷರಾದ ಆರ್.ಸಿ ದಿಲೀಪ್, ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಕೆಆರ್ ಶ್ರೀಹರಿ, ಹಾಗೂ ನಿರ್ದೇಶಕರುಗಳು ಶ್ರೀಮತಿ ಚಿಕ್ಕಮ್ಮ ಬಸವರಾಜ್, ಶ್ರೀ ಟಿ ಎಸ್ ವೆಂಕಟ ರಾಮ್, ಶ್ರೀ ಸುದರ್ಶನ್, ಶ್ರೀಮತಿ ಸರೋಜಾ ಶೇಖರ್, ಶ್ರೀಮತಿ ಎನ್ ಸುಜಾತ, ಶ್ರೀ ಜೆ ಎಸ್ ಸುನಿಲ್, ಶ್ರೀ ಎಂ ಬಸವರಾಜು, ಶ್ರೀ ಎಸ್ ಸೋಮಶೇಖರ, ಶ್ರೀಮತಿ ಎಂ ಭಾಗ್ಯ, ಶ್ರೀ ಜೆ ಕೃಷ್ಣ, ಶ್ರೀ ಆರ್ ಸುರೇಂದ್ರ ಮತ್ತು ಪಿಗ್ಮಿ ಏಜೆಂಟರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ದಿನಾಂಕ 12.06.2021 ರಂದು ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ವತಿಯಿಂದ ಸಹಕಾರಿ ಸದಸ್ಯರಿಗೆ ಆಹಾರ ಧಾನ್ಯಗಳ ಕಿಟ್ ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಟಿ ಗುರುರಾಜ್ ರವರು, ಶ್ರೀ ಪಿ. ರವಿಕುಮಾರ್ ಗೌಡ, ಕಾಂಗ್ರೆಸ್ ಮುಖಂಡರು, ಮಂಡ್ಯ ವಿಧಾನ ಸಭಾ ಕ್ಷೇತ್ರ, ಶ್ರೀ ರುದ್ರಪ್ಪ, ಕಾಂಗ್ರೆಸ್ ಅಧ್ಯಕ್ಷರು, ಮಂಡ್ಯ ನಗರ, ಶ್ರೀ ನಹೀಮ್, ಮತ್ತು ಕಿರಣಕುಮಾರ್, ನಗರಸಭಾ ಸದಸ್ಯರುಗಳು ಮತ್ತು ಸಹಕಾರಿ ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು.



**ಹಿಪ್ಪರಗಿ :** ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಬ್ಯಾಂಕ್ ನಿ., ಹಿಪ್ಪರಗಿ ಇವರ ವತಿಯಿಂದ ಇಂದು ಪ್ರಾಥಮಿಕ ಆರೋಗ್ಯ ಕೇಂದ್ರ, ಹಿಪ್ಪರಗಿಯಲ್ಲಿ ಕೊರೋನಾ 2ನೇ ಅಲೆಯನ್ನು ತಡೆಗಟ್ಟುವಲ್ಲಿ ಹಗಲಿರುಳು ಕಾರ್ಯನಿರ್ವಹಿಸಿದ ಕೊರೋನ ವಾರಿಯರ್ಸ್‌ಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾಕ್ಟರ್ ಹಾಗೂ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯತ್ ಪಿ.ಡಿ.ಓ ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರಿಗೆ ಸಹಕಾರಿ ವತಿಯಿಂದ 100ಕ್ಕೂ ಹೆಚ್ಚು ದಿನಸಿ ಸಾಮಾಗ್ರಿ ಕಿಟ್‌ಗಳನ್ನು ವಿತರಿಸಲಾಯಿತು.

## ಅಮೃತ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಕೋವೀಡ್ ಉಪಕರಣಗಳ ಸಲ್ಲಿಕೆ



**ಶಿವಮೊಗ್ಗ :** ಅಮೃತ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಮೃತ, ಅಮೃತ ದಿನಸಿ ಸೌಹಾರ್ದ ಸಹಕಾರಿ ನಿ., ಗರತಿಕೆರೆ ಹಾಗೂ ನಾಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ರಿಪ್ಪನಪೇಟೆ ಇವರ ವತಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಹುಂಚ ಹಾಗೂ ಕೊವೀಡ್ ಕೇರ್ ಸೆಂಟರ್ ಹುಂಚ ಇವರಿಗೆ ಡಿಜಿಟಲ್ ಬಿಪಿ ಪರೀಕ್ಷೆ ಉಪಕರಣ – 3, ಡಿಜಿಟಲ್ ಸಕ್ಕರೆ ಕಾಯಿಲೆ ಪರೀಕ್ಷೆ ಉಪಕರಣ – 3, ಡಿಜಿಟಲ್ ಜ್ವರ ಪರೀಕ್ಷೆ ಉಪಕರಣ – 3, ಡಿಜಿಟಲ್ ಪಲ್ಸ್ ಅಕ್ಸಿಮೀಟರ್ – 1000, ಬಿಸಿನೀರಿನ ಕೇಟಲ್ – 1 ಇವುಗಳನ್ನು ಡಾ. ಸುರೇಶ, ವೈದ್ಯಧಿಕಾರಿಗಳು ಹಾಗೂ ಟಿಹೆಚ್‌ಓ ಪ್ರಾಥಮಿಕ ಆರೋಗ್ಯ ಕೇಂದ್ರ ಹುಂಚ ಇವರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಅಮೃತ ವಿವಿದೋದೇಶ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರ್ ಮೂರ್ತಿ ಹೆಚ್.ಎನ್, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಜಯಕುಮಾರ್ ಹೆಚ್.ವಿ, ಅಮೃತ ದಿನಸಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ನಯನಕುಮಾರ್ ಹೆಚ್.ಕೆ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ರವೀನ್ ಕುಮಾರ್, ನಾಗೇಶ್ವರ ಪತ್ತಿನ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಹಾಗೂ ಇತರರು ಉಪಸ್ಥಿತರಿದ್ದರು.

## ಶ್ರೀ ರಾಮ ಸೌಹಾರ್ದ ಸಹಕಾರಿಯಿಂದ ಸ್ಯಾನಿಟೈಸರ್ ಹಾಗೂ ಮಾಸ್ಕ್ ವಿತರಣೆ



**ಬೈಂದೂರು :** ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ– ಆಪರೇಟಿವ್‌ನಿಂದ ಬೈಂದೂರು ವೃತ್ತ ಪೊಲೀಸರಿಗೆ ಮಾಸ್ಕ್ ಹಾಗೂ ಸ್ಯಾನಿಟೈಸರ್ ಅನ್ನು ವೃತ್ತ ನಿರೀಕ್ಷಕ ಸಂತೋಷ್ ಎ. ಕಾಯ್ಕಿಣಿ ಅವರಿಗೆ ನೀಡಲಾಯಿತು ಹಾಗೂ ಬೈಂದೂರು ಸಾರ್ವಜನಿಕ ಆಸ್ಪತ್ರೆಗೆ ಮಾಸ್ಕ್, ಸ್ಯಾನಿಟೈಸರ್ ಅನ್ನು ಸಾರ್ವಜನಿಕ ಆಸ್ಪತ್ರೆಯ ಆರೋಗ್ಯಾಧಿಕಾರಿ ಡಾ. ನಂದಿನಿ ಅವರಿಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಶ್ರೀ ರಾಮ ಸೌಹಾರ್ದ ಕೋ– ಆಪರೇಟಿವ್‌ನ ಅಧ್ಯಕ್ಷ ಎಸ್. ರಾಜು ಪೂಜಾರಿ ಬೈಂದೂರು. ಉಪಾಧ್ಯಕ್ಷ ವಿನಾಯಕ ರಾವ್, ನಿರ್ದೇಶಕರಾದ ರಾಮಕೃಷ್ಣ ಖಾರ್ವಿ, ಶಿವರಾಮ ಪೂಜಾರಿ, ಎಸ್‌ಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಶಿವರಾಮ ಪೂಜಾರಿ, ಸಂತೋಷ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಿಟ್ಟಣ್ಣ ರೈ ಉಪಸ್ಥಿತರಿದ್ದರು.

## ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸಹಕಾರಿಯಿಂದ ಆಹಾರ ಕಿಟ್ ವಿತರಣೆ



**ಮೈಸೂರು** : ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸೌಹಾರ್ದ ಸಹಕಾರಿ ನಿ., ಮತ್ತು ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಮಹಾಮಂಡಳದ ಸಂಯುಕ್ತಾಶ್ರಯದಲ್ಲಿ ಮೈಸೂರು ಮಹಾನಗರದ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ದಿನಾಂಕ 09.06.2021 ರಂದು ಕೊರೋನಾ ಸಂಕಷ್ಟದಿಂದ ಆರ್ಥಿಕವಾಗಿ ತೊಂದರೆಯಲ್ಲಿರುವ ಸದಸ್ಯರಿಗೆ ಸುಮಾರು 100 ದಿನಸಿ ಸಾಮಾಗ್ರಿಗಳ ಕಿಟ್‌ಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಕೆ ಪುರಾಣಿಕ್, ತು.ಶಿ.ಮಾ ಮಹಾಮಂಡಳದ ಅಧ್ಯಕ್ಷರಾದ ಶ್ರೀ ರವಿ ಶಾಸ್ತ್ರೀ ಮತ್ತು ಸಹಕಾರಿಯ ನಿರ್ದೇಶಕರಾದ ಶ್ರೀ ಆರೂರು ವಾಸುದೇವ ರಾವ್‌ರವರು, ಉಪಾಧ್ಯಕ್ಷರುಗಳಾದ ಶ್ರೀ ಜಯರಾಮ್ ಭಟ್ ಪಿ, ಶ್ರೀ ನಾಗೇಶ್ ಪಿ.ವಿ. ಶ್ರೀ ಜಗದೀಶ್ ಹೆಬ್ಬಾರ್, ಶ್ರೀ ರಘುವೀರ್ ಪುರಾಣಿಕ್, ಶ್ರೀ ವಿಠ್ಠಲ್ ಐ.ಎಮ್ ಮತ್ತು ಕಾರ್ಯದರ್ಶಿಗಳಾದ ಶ್ರೀಮತಿ ಸುಪ್ರಭಾ ಎಸ್. ಭಟ್, ಶ್ರೀಮತಿ ಮೇಘ ಇವರು ಉಪಸ್ಥಿತರಿದ್ದರು.



## ಉಚಿತ ಕೋವಿಡ್-19 ಲಸಿಕಾ ಅಭಿಯಾನ ಕಾರ್ಯಕ್ರಮ

**ವಿಜಯಪುರ** : ಶ್ರೀ ಧಾನಶ್ರೀ ಸೌಹಾರ್ದ ಸಹಕಾರಿ ನಿ., ವಿಜಯಪುರ ಹಾಗೂ ಶ್ರೀ ಧಾನಮ್ಮ ದೇವಿ ಟ್ರಸ್ಟ್ ಸಹಯೋಗದಲ್ಲಿ ವಿಜಯಪುರ ನಗರದ ಆನಂದ ನಗರದ ಶ್ರೀ ಧಾನಮ್ಮ ದೇವಿ ಗುಡಿಯ ಆವರಣದಲ್ಲಿ ಸಾವಿರಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ಲಸಿಕೆ ಹಾಕಲಾಗಿದೆ. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಪ್ಪು ಇಟ್ಟಂಗಿ, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ದಿನಸಿ ಕಿಟ್ ವಿತರಣೆ ಕಾರ್ಯಕ್ರಮ



**ಕೊಪ್ಪಳ** : ದಿನಾಂಕ 16-06-2021 ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಿ ವತಿಯಿಂದ ಕೊರೋನ ವೈರಸ್ ಸಂಕಷ್ಟ ಸಮಯದಲ್ಲಿ ಕಾರ್ಯನಿರ್ವಹಿಸುವವರಿಗೆ ಕೋರನಾ ವಾರಿಯರ್ಸ್‌ಗಳಾದ ಆಶಾ ಕಾರ್ಯಕರ್ತೆಯರಿಗೆ, ಮಾಧ್ಯಮದವರಿಗೆ ಆಹಾರ ಕಿಟ್ ವಿತರಿಸಲಾಯಿತು. ಈ ಸಂದರ್ಭದಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನೀರಿನ ಪ್ಲಾಂಟ್ ವಿತರಣೆ



**ಕೊಪ್ಪಳ** : ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಹಕಾರಿ ವತಿಯಿಂದ ಕೊರೋನಾ ರೋಗಿಗಳಿಗೆ ಬಿಸಿ ಹಾಗೂ ತಣ್ಣೆಯ ಆರ್.ಓ ನೀರಿನ ಪ್ಲಾಂಟ್ ಅನ್ನು ಸಹಕಾರಿ ವತಿಯಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕೋವೀಡ್ ಲಸಿಕಾ ಅಭಿಯಾನ ಕಾರ್ಯಕ್ರಮ



**ದಕ್ಷಿಣ ಕನ್ನಡ :** ದಿನಾಂಕ 18.06.2021ರಂದು ಮಂಗಳೂರು ನಗರದ ಎಮ್.ಸಿ.ಸಿ ಬ್ಯಾಂಕಿನಲ್ಲಿ ಸಹಕಾರ ಸಂಘ ಮತ್ತು ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಕೋವಿಡ್ ಲಸಿಕಾ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ವೈದಾಧಿಕಾರಿ ಡಾ. ಸುಷ್ಮಾ ಜಾಸ್ಮಿನ್, ಅರ್ಬನ್ ಬ್ಯಾಂಕ್ ಫೆಡರೇಷನ್ ರಾಜ್ಯ ನಿರ್ದೇಶಕರಾದ ಶ್ರೀ ಹರೀಶ್ ಆಚಾರ್ಯ, ಕ್ರೆಡಿಟ್ ಫೆಡರೇಷನ್ ನಿರ್ದೇಶಕರಾದ ಶ್ರೀ ಚಿತ್ತರಂಜನ್ ಬೋಳಾರ್, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ, ಎಮ್.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನೀಲ್ ಲೋಬೊ ಉಪಸ್ಥಿತರಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಂಯೋಜಕರಾದ ಶ್ರೀ ಗುರು ಪ್ರಸಾದ್ ಬಂಗೇರ ಇವರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 473 ಸಿಬ್ಬಂದಿಗಳು ಲಸಿಕೆಯನ್ನು ಪಡೆದರು.

## ಅಕ್ಕನಾಗಮ್ಮ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ದಿನಸಿ ಕಿಟ್ ವಿತರಣೆ



**ಬಸವನಬಾಗೇವಾಡಿ :** ಅಕ್ಕನಾಗಮ್ಮ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ 50ಕ್ಕೂ ಹೆಚ್ಚು ಬಡ ಕುಟುಂಬಗಳಿಗೆ ದಿನಸಿ ಕಿಟ್, ಮಾಸ್ಕ್, ಸ್ಯಾನಿಟೈಸರ್ ವಿತರಿಸಲಾಯಿತು. ನಂತರ ಸಹಕಾರಿಯ ಅಧ್ಯಕ್ಷರಾದ ಡಾ. ಸುಮಾಕಲ್ಲೂರ ಮಾತನಾಡಿ ಕೋವೀಡ್ ಸಮಯದಲ್ಲಿ ಸಾಕಷ್ಟು ಜನರು ತೊಂದರೆ ಅನುಭವಿಸಿದ್ದಾರೆ. ಕೋರೋನಾ ಸೋಂಕು ಹರಡದಂತೆ ಪ್ರತಿಯೊಬ್ಬರೂ ಸರಕಾರದ ಮಾರ್ಗಸೂಚಿ ಅನುಸರಿಸಿ ಮುನ್ನಚ್ಚರಿಕೆ ವಹಿಸಬೇಕು. ಲಾಕ್‌ಡೌನ್ ಸಂದರ್ಭದಲ್ಲಿ ದುಡಿಮೆ ಇಲ್ಲದೇ ಸಾಕಷ್ಟು ಜನರು ಸಂಕಷ್ಟಕ್ಕಿಡಾಗಿದ್ದಾರೆ. ಅಂತಹವರನ್ನು ಗುರುತಿಸಿ ನೆರವು ನೀಡಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷೆ ಜಯಶ್ರೀ ತೆಗ್ಗಿನಮಠ, ನಿರ್ದೇಶಕರಾದ ನಿರ್ಮಲಾ ಅಗರವಾಲ, ಕವಿತಾ ದುಂಬಾಳಿ, ಪ್ರತಿಭಾ ಮಸನಿಬಾಳ, ಗಿರಿಜಾ ಪಾಟೀಲ, ನಜೀರ್ ಅವಟಿ, ಭರತ ಅಗರವಾಲ, ಶಿವಲಿಂಗಯ್ಯ ತೆಗ್ಗಿನಮಠ, ಸುನೀಲ ದುಂಬಾಳಿ, ಬಾಬು ಸಜ್ಜನ, ಸಂಗಮ್ಮ ಮದರಿ, ಮೇಘಾ ಹಿರೇಮಠ, ಶಿವಮ್ಮ ಅವಟಿ, ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಹಕಾರಿಯ ಮ್ಯಾನೇಜರ್ ಜಯಶ್ರೀ ಪೂಜಾರಿ ಸ್ವಾಗತಿಸಿದರು. ಮೀನಾಕ್ಷಿ ಬೆಣ್ಣೂರ ವಂದಿಸಿದರು.




**ಚಿತ್ರದುರ್ಗ:** ಶ್ರೀ ಕನ್ನಿಕ ಪರಮೇಶ್ವರಿ ಸೌಹಾರ್ದ ಸಹಕಾರಿ ವತಿಯಿಂದ ರಕ್ತದಾನ ಕಾರ್ಯಕ್ರಮ ಹಾಗೂ ಜಿಲ್ಲಾ ಆಸ್ಪತ್ರೆ ಬಳಿ 600 ಜನರಿಗೆ ಆಹಾರ ಪೊಟ್ಟಣಗಳನ್ನು, ಸಿಹಿ ಮತ್ತು ನೀರಿನ ಬಾಟಲ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಬಾಗಲಕೋಟೆ ಬಸವಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ

| ಆರ್ಥಿಕ ಅಂಶಗಳು | 31.03.2021ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 27,45,500 |
| ಒಟ್ಟು ಠೇವಣಿ | 6,27,13,530.32 |
| ಇತರೆ ಹೊಣೆಗಾರಿಕೆ | 3,58,321.00 |
| ಕೈಶಿಲ್ಕು ಹಾಗೂ ಬ್ಯಾಂಕಿನ ಹಣ | 2,10,15,008.22 |
| ಹೂಡಿಕೆಗಳು | 80,99,000.00 |
| ಸಾಲ ಮತ್ತು ಮುಂಗಡಗಳು | 3,53,78,936.00 |
| ನಿವ್ವಳ ಲಾಭ 2020-21ಕ್ಕೆ | 1,12,889.90 |
| ದುಡಿಯುವ ಬಂಡವಾಳ | 6,47,29,112.32 |
| ವಾರ್ಷಿಕ ವಹಿವಾಟು | 24,82,02,787.42 |

# ಸಹಕಾರ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕರ (MD) / ಪೂರ್ಣಾವಧಿ ನಿರ್ದೇಶಕರ (WTD) ಹುದ್ದೆಗೆ ಶಾಸಕರು ಸೇರಿ ಜನಪ್ರತಿನಿಧಿಗಳಿಗೆ ಆರ್.ಬಿ.ಐ ನಿಷೇಧ




**ಮುಂಬಯಿ :** ಸಂಸದರು ಮತ್ತು ಶಾಸಕರು ನಗರ ಸಹಕಾರ ಬ್ಯಾಂಕ್‌ಗಳ ಆಡಳಿತ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಪೂರ್ಣಾವಧಿ ನಿರ್ದೇಶಕ ಹುದ್ದೆಗೇರುವುದನ್ನು ನಿಷೇಧಿಸಿ ಆರ್‌ಬಿಐ ಮಹತ್ವದ ಆದೇಶ ಹೊರಡಿಸಿದೆ. ಇದೇ ವೇಳೆ ಈ ಹುದ್ದೆಗೆ ಏರುವವರಿಗೆ ಉನ್ನತ ಶೈಕ್ಷಣಿಕ ಅರ್ಹತೆ ನಿಗದಿಪಡಿಸಿದ್ದು ಕನಿಷ್ಠ 35 ಗರಿಷ್ಠ 70 ವರ್ಷದ ವಯೋಮಿತಿ ವಿಧಿಸಿದೆ

ನಗರಸಭೆ, ಸ್ಥಳೀಯಾಡಳಿತ ಸಂಸ್ಥೆಗಳ ಪ್ರತಿನಿಧಿಗಳು, ಸಂಸದರು, ಶಾಸಕರು, ಸಹಕಾರ ಬ್ಯಾಂಕ್‌ಗಳಲ್ಲಿ ಉನ್ನತ ಹುದ್ದೆಯನ್ನು ಪಡೆದುಕೊಳ್ಳುವಂತಿಲ್ಲ. ಅದೇ ರೀತಿ ವ್ಯಾಪಾರೋದ್ಯಮದಲ್ಲಿ ತೊಡಗಿದ್ದವರು ಯಾವುದೇ ಕಂಪನಿ ಹೊಂದಿದವರು ಹುದ್ದೆಗಳನ್ನು ಹೊಂದಲು ಅವಕಾಶ ನಿರಾಕರಿಸಲಾಗಿದೆ.

ಕ್ರಿಮಿನಲ್ ಅಪರಾಧಗಳನ್ನು ದೋಷಿಗಳಾದವರು ಇಂತಹ ಹುದ್ದೆಗಳು ಪಡೆಯಲು ಅನರ್ಹರಾಗಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕ ಅಥವಾ ಪೂರ್ಣಾವಧಿ ನಿರ್ದೇಶಕ ಹುದ್ದೆಗೇರುವವರು ಸ್ನಾತಕೋತ್ತರ ಪದವಿಧರರಾಗಿರಬೇಕು. ಇಲ್ಲವೇ ಚಾರ್ಟರ್ಡ್ ಅಕೌಂಟೆಂಟ್, ಎಂಬಿಎ ಅಥವಾ ಸಹಕಾರ ವಹಿವಾಟು, ಬ್ಯಾಂಕಿಂಗ್ ನಿರ್ವಹಣೆಯ ಡಿಪ್ಲೋಮಾ ಪೂರ್ಣಗೊಳಿಸಿರಬೇಕೆಂದು ತಿಳಿಸಲಾಗಿದೆ ಈ ಬಗ್ಗೆ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ RBI/2021-22/60 DOR.GOV. REC.25/12.10.000/2021-22 ದಿನಾಂಕ 25.06.2021 ಇದನ್ನು ಗಮನಿಸುವುದು.



**ಬೆಳಗಾವಿ :** ಶ್ರೀ ಬಾಲಗಣಪತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ, ಬೆಳಗಾವಿ ವತಿಯಿಂದ ಸಹಕಾರಿಯು ಪ್ರಾರಂಭವಾಗಿ 6 ವರ್ಷ ಮುಗಿದು 7ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು, ಪ್ರಸ್ತುತ ಕೋವೀಡ–19 2ನೇ ಅಲೆಯು ವ್ಯಾಪಕವಾಗಿ ಹರಡಿದ್ದು ಸದಸ್ಯರ/ಸಾರ್ವಜನಿಕ ಮತ್ತು ಸಿಬ್ಬಂದಿಗಳ ಹಿತ ದೃಷ್ಟಿಯಿಂದ ಹಾಗೂ ಆರೋಗ್ಯದ ದೃಷ್ಟಿಯಿಂದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಪ್ಪಾ ರಾಮಪ್ಪಾ ಚಿಕ್ಕೋಡಿ ಮತ್ತು ನಿರ್ದೇಶಕ ಮಂಡಳಿ, ಹಾಗೂ ಸಿಬ್ಬಂದಿಗಳ ನೇತೃತ್ವದಲ್ಲಿ ಸಂಘದ ಸದಸ್ಯರಿಗೆ, ಬಡವರಿಗೆ, ಹಿರಿಯನಾಗರಿಕರಿಗೆ, ವೃದ್ಧಾಶ್ರಮಗಳಿಗೆ Steamer/Vaporiser ಗಳನ್ನು ವಿತರಿಸಲಾಯಿತು.

**ಮಂಡ್ಯ :** ಮಲಬಾರ್ ಗೋಲ್ಡ್, ಮಂಡ್ಯ ಹಾಗೂ ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರ ವತಿಯಿಂದ ಶಾಮಿಯಾನ ಅಂಗಡಿ ಕಾರ್ಮಿಕರಿಗೆ ಉಚಿತ ಆಹಾರ ಧಾನ್ಯ ಕಿಟ್ ವಿತರಣೆ ಮಾಡಲಾಯಿತು. ಈ ಸಂರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಹಾಗೂ ಮಲಬಾರ್ ಗೋಲ್ಡ್ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ಅನಂತ ಸೌಹಾರ್ದ ಸಹಕಾರಿ ನಿಯಮಿತ ಚಳ್ಳಕೆರೆ ಸಹಕಾರಿ ವತಿಯಿಂದ ಆಹಾರ ಪೊಟ್ಟಣಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಹಾವೇರಿ :** ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೇರೂರು ಸಹಕಾರಿಯು ಕೋವೀಡ್ 2ನೇ ಅಲೆಯಲ್ಲಿ ಸಂಕಷ್ಟದಲ್ಲಿರುವ 26 ಬಡ ಕೂಲಿ ಕಾರ್ಮಿಕ ಕುಟುಂಬಗಳಿಗೆ 5ಕೆ.ಜಿ ಅಕ್ಕಿ, 2ಕೆ.ಜಿ ಜೋಳ, 1ಕೆ.ಜಿ ರವಾ, 1ಕೆ.ಜಿ. ಒಳ್ಳೆಣ್ಣಿ, 1ಕೆ.ಜಿ ಅವಲಕ್ಕಿ, 1ಕೆ.ಜಿ. ತೋಗರಿ ಬೇಳೆ, 1/2ಕೆ.ಜಿ ಕಡ್ಲೆ ಬೇಳೆ, 1ಕೆ.ಜಿ. ಬೆಲ್ಲ, 1/4 ಕೆ.ಜಿ. ಶೇಂಗ, 1ಕೆ.ಜಿ ಸಕ್ಕರೆ, 1/4ಕೆ.ಜಿ. ಟೀ ಪುಡಿ ಇತರೆ ದಿನಸಿ ಪದಾರ್ಥಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# Stress Management

- BHASKAR HEGDE KAGERI

While it may seem like there's nothing you can do about stress at work and home, there are steps you can take to relieve the pressure and regain control.

## The importance of managing stress

If you're living with high levels of stress, you're putting your entire well-being at risk. Stress wreaks havoc on your emotional equilibrium, as well as your physical health. It narrows your ability to think clearly, function effectively, and enjoy life. It may seem like there's nothing you can do about stress. The bills won't stop coming, there will never be more hour in the day, and your work and family responsibilities will always be demanding. But you have a lot more control than you might think.

Effective stress management helps you break the hold stress has on your life, so you can be happier, healthier, and more productive. The ultimate goal is a balanced life, with time for work, relationships, relaxation, and fun—and the resilience to hold up under pressure and meet challenges head on. But stress management is not one-size-fits-all. That's why it's important to experiment and find out what works best for you. The following stress management tips can help you do that.

## Tip 1: Identify the sources of stress in your life

Stress management starts with identifying the sources of stress in your life. This isn't as straightforward as it sounds. While it's easy to identify major stressors such as changing jobs, moving, or going through a divorce, pinpointing the sources of chronic stress can be more complicated. It's all too easy to overlook how your own thoughts, feelings, and behaviors contribute to your everyday stress levels.

Sure, you may know that you're constantly worried about work deadlines, but maybe it's your procrastination, rather than the actual job demands, that is causing the stress.

## To identify your true sources of stress, look closely at your habits, attitude, and excuses:

- Do you explain away stress as temporary ("I just have a million things going on right now") even though you can't remember the last time you took a breather?
- Do you define stress as an integral part of your work or home life ("Things are always crazy around here") or as a part of your personality ("I have a lot of nervous energy, that's all")?
- Do you blame your stress on other people or outside events, or view it as entirely normal and unexceptional?

Until you accept responsibility for the role you play in creating or maintaining it, your stress level will remain outside your control.

## Start a stress journal

A stress journal can help you identify the regular stressors in your life and the way you deal with them. Each time you feel stressed, keep track of it in your journal or use a stress tracker on your phone. Keeping a daily log will enable you to see patterns and common themes. Write down:

- What caused your stress (make a guess if you're unsure).
- How you felt, both physically and emotionally.
- How you acted in response.
- What you did to make yourself feel better

## Tip 2: Practice the 4 A's of stress management

While stress is an automatic response from your nervous system, some stressors arise at predictable times: your commute to work, a meeting with your boss, or family gatherings, for example. When handling such predictable stressors, you can either change the situation or change your reaction. When deciding which option to choose in any given scenario, it's helpful to think of the four A's: avoid, alter, adapt, or accept.

The four A's – Avoid, Alter, Adapt & Accept Avoid unnecessary stress

It's not healthy to avoid a stressful situation that needs to be addressed, but you may be surprised by the number of stressors in your life that you can eliminate.

- Learn how to say "no." Know your limits and stick to them. Whether in your personal or professional life, taking on more than you can handle is a surefire recipe for stress.
- Distinguish between the "shoulds" and the "musts" and, when possible, say "no" to taking on too much.
- Avoid people who stress you out. If someone consistently causes stress in your life, limit the amount of time you spend with that person, or end the relationship.
- Take control of your environment. If the evening news makes you anxious, turn off the TV. If traffic makes you tense, take a longer but less-traveled route. If going to the market is an unpleasant chore, do your grocery shopping online.
- Pare down your to-do list. Analyze your schedule, responsibilities, and daily tasks. If you've got too much on your plate, drop tasks that aren't truly necessary to the bottom of the list or eliminate them entirely.

### Alter the situation

If you can't avoid a stressful situation, try to alter it. Often, this involves changing the way you communicate and operate in your daily life

- Express your feelings instead of bottling them up. If something or someone is bothering you, be more assertive and communicate your concerns in an open and respectful way. If you've got an exam to study for and your chatty roommate

  just got home, say up front that you only have five minutes to talk. If you don't voice your feelings, resentment will build and the stress will increase.
- Be willing to compromise. When you ask someone to change their behavior, be willing to do the same. If you both are willing to bend at least a little, you'll have a good chance of finding a happy middle ground.
- Create a balanced schedule. All work and no play is a recipe for burnout. Try to find a balance between work and family life, social activities and solitary pursuits, daily responsibilities and downtime.

### Adapt to the stressor

- If you can't change the stressor, change yourself. You can adapt to stressful situations and regain your sense of control by changing your expectations and attitude.
- Reframe problems. Try to view stressful situations from a more positive perspective. Rather than fuming about a traffic jam, look at it as an opportunity to pause and regroup, listen to your favorite radio station, or enjoy some alone time.
- Look at the big picture. Take perspective of the stressful situation. Ask yourself how important it will be in the long run. Will it matter in a month? A year? Is it really worth getting upset over? If the answer is no, focus your time and energy elsewhere.
- Adjust your standards. Perfectionism is a major source of avoidable stress. Stop setting yourself up for failure by demanding perfection. Set reasonable standards for yourself and others, and learn to be okay with "good enough."
- Practice gratitude. When stress is getting you down, take a moment to reflect on all the things you appreciate in your life, including your own positive qualities and gifts. This simple strategy can help you keep things in perspective.

### Accept the things you can't change

Some sources of stress are unavoidable. You can't prevent or change stressors such as the death of a loved one, a serious illness, or a national recession. In such cases, the best way to cope with stress is to accept things as they are. Acceptance may be difficult, but in the long run, it's easier than railing against a situation you can't change.

- Don't try to control the uncontrollable. Many things in life are beyond our control, particularly the behavior of other people. Rather than stressing out over them, focus on the things you can control such as the way you choose to react to problems.
- Look for the upside. When facing major challenges, try to look at them as opportunities for personal growth. If your own poor choices contributed to a stressful situation, reflect on them and learn from your mistakes.
- Learn to forgive. Accept the fact that we live in an imperfect world and that people make mistakes. Let go of anger and resentments. Free yourself from negative energy

by forgiving and moving on.

- Share your feelings. Expressing what you're going through can be very cathartic, even if there's nothing you can do to alter the stressful situation. Talk to a trusted friend or make an appointment with a therapist.

## Tip 3: Get moving

When you're stressed, the last thing you probably feel like doing is getting up and exercising. But physical activity is a huge stress reliever—and you don't have to be an athlete or spend hours in a gym to experience the benefits. Exercise releases endorphins that make you feel good, and it can also serve as a valuable distraction from your daily worries.

While you'll get the most benefit from regularly exercising for 30 minutes or more, it's okay to build up your fitness level gradually. Even very small activities can add up over the course of a day. The first step is to get yourself up and moving. Here are some easy ways to incorporate exercise into your daily schedule:

- Put on some music and dance around. Take your dog for a walk.
- Walk or cycle to the grocery store.
- Use the stairs at home or work rather than an elevator.
- Park your car in the farthest spot in the lot and walk the rest of the way.
- Pair up with an exercise partner and encourage each other as you work out.
- Play an activity-based game with your kids.
- The stress-busting magic of mindful rhythmic exercise While just about any form of physical activity can help burn away tension and stress, rhythmic activities are especially effective. Good choices include walking, running, swimming, dancing, cycling, tai chi, and aerobics. But whatever you choose, mak sure it's something you enjoy so you're more likely to stick with it.

While you're exercising, make a conscious effort to pay attention to your body and the physical (and sometimes emotional) sensations you experience as you're moving. Focus on coordinating your breathing with your movements, for example, or notice how the air or sunlight feels on your skin. Adding this mindfulness element will help you break out of the cycle of negative thoughts that often accompanies overwhelming stress.

## Tip 4: Connect to others

There is nothing more calming than spending quality time with another human being who makes you feel safe and understood. In fact, face-to-face interaction triggers a cascade of hormones that counteracts the body's defensive "fight-or-flight" response. It's nature's natural stress reliever As an added bonus, it also helps stave off depression and anxiety. So make it a point to connect regularly—and in person—with family and friends.

Keep in mind that the people you talk to don't have to be able to fix your stress. They simply need to be good listeners. And try not to let worries about looking weak or being a burden keep you from opening up. The people who care about you will be flattered by your trust. It will only strengthen your bond.

Of course, it's not always realistic to have a pal close by to lean on when you feel

overwhelmed by stress, but by building and maintaining a network of close friends you can improve your resiliency to life's stressors.

Tips for building relationships

- Reach out to a colleague at work.
- Help someone else by volunteering
- Have lunch or coffee with a friend.
- Ask a loved one to check in with you regularly.
- Accompany someone to the movies or a concert.
- Call or email an old friend.
- Go for a walk with a workout buddy.
- Schedule a weekly dinner date.
- Meet new people by taking a class or joining a club.
- Confide in a clergy member, teacher, or sports coach.

## Tip 5: Make time for fun and relaxation

Beyond a take-charge approach and a positive attitude, you can reduce stress in your life by carving out "me" time. Don't get so caught up in the hustle and bustle of life that you forget to take care of your own needs. Nurturing yourself is a necessity, not a luxury. If you regularly make

time for fun and relaxation, you'll be in a better place to handle life's stressors.

- Set aside leisure time. Include rest and relaxation in your daily schedule. Don't allow other obligations to encroach. This is your time to take a break from all responsibilities and recharge your batteries.
- Do something you enjoy every day. Make time for leisure activities that bring you joy, whether it be stargazing, playing the piano, or working on your bike.
- Keep your sense of humor. This includes the ability to laugh at yourself. The act of laughing helps your body fight stress in a number of ways.
- Take up a relaxation practice. Relaxation techniques such as yoga, meditation, and deep breathing activate the body's relaxation response, a state of restfulness that is the opposite of the fight or flight or mobilization stress response. As you learn and practice these techniques, your stress levels will decrease and your mind and body will become calm and centered

### Tip 6: Manage your time better

Poor time management can cause a lot of stress. When you're stretched too thin and running behind, it's hard to stay calm and focused. Plus, you'll be tempted to avoid or cut back on all the healthy things you should be doing to keep stress in check, like socializing and getting enough sleep. The good news: there are things you can do to achieve a healthier work-life balance.

- Don't over-commit yourself. Avoid scheduling things back-to-back or trying to fit too much into one day. All too often, we underestimate how long things will take.
- Prioritize tasks. Make a list of tasks you have to do, and tackle them in order of importance. Do the high-priority items first. If you have something particularly unpleasant or stressful to do, get it over with early. The rest of your day will be more pleasant as a result.
- Break projects into small steps. If a large project seems overwhelming, make a step-by- step plan. Focus on one manageable step at a time, rather than taking on everything at once.
- Delegate responsibility. You don't have to do it all yourself, whether at home, school, or on the job. If other people can take care of the task, why not let them? Let go of the desire to control or oversee every little step. You'll be letting go of unnecessary stress in the process.

### Tip 7: Maintain balance with a healthy lifestyle

In addition to regular exercise, there are other healthy lifestyle choices that can increase your resistance to stress.

- Eat a healthy diet. Well-nourished bodies are better prepared to cope with stress, so be mindful of what you eat. Start your day right with breakfast, and keep your energy up and your mind clear with balanced, nutritious meals throughout the day.
- Reduce caffeine and sugar. The temporary "highs" caffeine and sugar provide often end with a crash in mood and energy. By reducing the amount of coffee, soft drinks, chocolate, and sugar snacks in your diet, you'll feel more relaxed and you'll sleep better
- Avoid alcohol, cigarettes, and drugs. Self-medicating with alcohol or drugs may provide an easy escape from stress, but the relief is only temporary. Don't avoid or mask the issue at hand; deal with problems head on and with a clear mind.
- Get enough sleep. Adequate sleep fuels your mind, as well as your body. Feeling tired will increase your stress because it may cause you to think irrationally.

### Tip 8: Learn to relieve stress in the moment

When you're frazzled by your morning commute, stuck in a stressful meeting at work, or fried from another argument with your spouse, you need a way to manage your stress levels right now. That's where quick stress relief comes in.

The fastest way to reduce stress is by taking a deep breath and using your senses—what you see, hear, taste, and touch—or through a soothing movement. By viewing a favorite photo, smelling a specific scent, listening to a favorite piece of music, tasting a piece of gum, or hugging a pet, for example, you can quickly relax and focus yourself.

Of course, not everyone responds to each sensory experience in the same way. The key to quick stress relief is to experiment and discover the unique sensory experiences that work best for you.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-15)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-15)



– ಶ್ರೀ ಯಶವಂತ ಡೋಂಗ್ರೆ

### ಎಸ್‌ಡಿಜಿ 15 : ಭೂಮಿಯ ಮೇಲಿನ ಜೀವವೈವಿಧ್ಯ

ಭೂಮಂಡಲದ ಪರಿಸರ ವ್ಯವಸ್ಥೆಯನ್ನು ರಕ್ಷಿಸಿ, ಮರು ಸ್ಥಾಪಿಸಿ ಮತ್ತು ಸುಸ್ಥಿರ ನೆಲೆಯಲ್ಲಿ ಬಳಕೆಮಾಡಿ, ಅರಣ್ಯಗಳನ್ನು ಸುಸ್ಥಿರವಾಗಿ ವ್ಯವಸ್ಥಾಪನೆಗೊಳಿಸಿ, ಮರುಭೂಮೀಕರಣದ ವಿರುದ್ಧ ಹೋರಾಟನಡೆಸಿರಿ, ನೆಲದ ಫಲವತ್ತತೆಯ ಕುಸಿತವನ್ನು ತಡೆಯಿರಿ ಮತ್ತು ಮರುಸ್ಥಾಪಿಸಿ, ಹಾಗೂ ಜೀವವೈಧ್ಯತೆಯ ಅಳಿವನ್ನು ತಡೆಯಿರಿ ಎಂದು ಈ ಗುರಿಯಲ್ಲಿ ತಿಳಿಸಲಾಗಿದೆ (Life on Earth: Protect, restore and promote sustainable use of terrestrial ecosystems, sustainably manage forests, combat desertification, and halt and reverse land degradation and halt biodiversity loss). ಸುಸ್ಥಿರ ಅಭಿವೃದ್ಧಿಯ ಬಗೆಗಿನ ಹದಿನೈದನೆಯ ಗುರಿಯು ಭೂಮಿಯ ಮೇಲಿನ ಎಲ್ಲ ಜೀವ ರಾಶಿಗಳನ್ನು ರಕ್ಷಿಸುವ ಮತ್ತು ಮಿತವಾಗಿ ಹಾಗೂ ಅವುಗಳಿಗೆ ಧಕ್ಕೆಯಾಗದಂತೆ ಉಪಯೋಗಿಸುವ ಬಗೆಗೆ ಒತ್ತು ಕೊಡುತ್ತದೆ. ನಮ್ಮ ಭೂಮಂಡಲದ ಎಲ್ಲ ಬಗೆಯ ಜೀವರಾಶಿಗಳನ್ನು ರಕ್ಷಿಸುವ ಹಾಗು ಸಂಪನ್ಮೂಲಗಳನ್ನು ಸುಸ್ಥಿರವಾಗಿ ಬಳಸುವ ನಿಟ್ಟಿನಲ್ಲಿ ಕಳೆದ ಒಂದೆರಡು ದಶಕಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿಸಲಾಗಿದೆಯಾದರೂ, ಇದು ಜಗತ್ತಿನೆಲ್ಲೆಡೆ ಒಂದೇ ಬಗೆಯಲ್ಲಿ ನಡೆದಿಲ್ಲ. ಜೀವವೈವಿಧ್ಯದ ನಾಶ, ನೆಲದ ಗುಣಮಟ್ಟದ ಕುಸಿತ ಹಾಗೂ ವನ್ಯಪ್ರಾಣಿಗಳ ನಾಶಗಳಂತಹ ಸಮಸ್ಯೆಗಳನ್ನು ತಡೆಯಲು ನಾವು ಮಾಡಬೇಕಾದುದು ಬಹಳಷ್ಟಿದೆ. ಕೃಷಿಗೆ ಉಪಯೋಗಿಸುತ್ತಿರುವ ನೆಲದಲ್ಲಿ ಸುಮಾರು ಐದನೆ ಒಂದರಷ್ಟು ಭಾಗದಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ ನಿರಂತರವಾಗಿ ಫಲವತ್ತತೆಯು ಕುಸಿತವಾಗುತ್ತಿದ್ದು ಇದು ದಕ್ಷಿಣ ಅಮೆರಿಕ ಮತ್ತು ಆಫ್ರಿಕದ ದೇಶಗಳಲ್ಲಿ ಸರಾಸರಿ ಪ್ರಮಾಣಕ್ಕಿಂತ ಹೆಚ್ಚಾಗಿದೆ. ಅರಣ್ಯ ಮತ್ತು ವನ್ಯಜೀವಿಗಳ ನಾಶ ಅವ್ಯಾಹತವಾಗಿ ಮುಂದುವರೆದಿದ್ದು, ಇದರಿಂದಾಗಿ ಮರುಭೂಮೀಕರಣ ಮತ್ತು ವಾತಾವರಣದ ಬದಲಾವಣೆಗಳು ಹೆಚ್ಚಲಿದೆ.

ಮೇಲಿನ ಹಲವು ಸಮಸ್ಯೆಗಳ ಹಿನ್ನೆಲೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಈ ಗುರಿಯಲ್ಲಿ ಹಲವು ಪ್ರಮುಖ ಉಪಕ್ರಮಗಳ ಮೇಲೆ ಒತ್ತು ನೀಡಲಾಗಿದೆ. 2030ರೊಳಗೆ ಮರುಭೂಮೀಕರಣದ ಪ್ರಕ್ರಿಯೆಯನ್ನು ತಡೆಯಬೇಕೆಂದೂ ಮತ್ತು ಮಣ್ಣಿನ ಫಲವತ್ತತೆಯನ್ನು ರಕ್ಷಿಸಲು ಕ್ರಮಕೈಗೊಳ್ಳಬೇಕೆಂದೂ ಈ ಗುರಿಯು ಎಲ್ಲ ದೇಶಗಳಿಗೆ ಸೂಚಿಸುತ್ತದೆ. ಹಾಗೆಯೇ ಅರಣ್ಯ ಸಂರಕ್ಷಣೆ, ನದಿಗಳು ಮತ್ತು ನೀರಿನ ಮೂಲಗಳ ರಕ್ಷಣೆ, ಬೆಟ್ಟ ಪ್ರದೇಶಗಳ ಜೀವವೈವಿಧ್ಯದ ರಕ್ಷಣೆ ಮತ್ತು ಇತರೆ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ವ್ಯವಸ್ಥಾಪನೆಗೆ ಅಂತಾರಾಷ್ಟ್ರೀಯ ಒಪ್ಪಂದಗಳ ಅನುಸಾರ ಎಲ್ಲ ದೇಶಗಳೂ ನೀತಿಗಳು ಮತ್ತು ಕಾನೂನುಗಳನ್ನು ರಚಿಸಿ ಅನುಷ್ಠಾನಗೊಳಿಸಬೇಕೆಂದೂ ಆಶಿಸುತ್ತದೆ. ಅಳಿವಿನಂಚಿನಲ್ಲಿರುವ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸಿ ರಕ್ಷಿಸುವುದು, ಪರಿಸರಕ್ಕೆ ಧಕ್ಕೆ ತರಬಲ್ಲ ಯಾವುದೇ ಹೊಸ ತಳಿಗಳನ್ನು ಅಭಿವೃದ್ಧಿಪಡಿಸದಿರುವುದು ಮತ್ತು ಬೆಳೆಸದಿರುವುದು, ಅರಣ್ಯೋತ್ಪನ್ನಗಳು ಹಾಗೂ ಪ್ರಾಣಿಪಕ್ಷಿಗಳ ಕಳ್ಳಸಾಗಣೆಯನ್ನು ತಡೆಯುವುದು ಮುಂತಾದುವುಗಳಿಗೆ 2020ರ ಅಂತ್ಯದೊಳಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಅನುಷ್ಟಾನಕ್ಕೆ ತರಬೇಕೆಂದೂ ಈ ಗುರಿಯು ವಿಧಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಮೇಲೆ ಹೇಳಿದ ನಿರ್ದಿಷ್ಟ ಗುರಿಗಳನ್ನು ತಲುಪುವುದು ಸಾಧ್ಯವಾಗುವಂತೆ ಈ ಚಟುವಟಿಕೆಗಳಿಗೆ ಸರಕಾರಗಳು ಹೆಚ್ಚಿನ ಅನುದಾನಗಳನ್ನು ನಿಗದಿಪಡಿಸಬೇಕೆಂದೂ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದಗಳನ್ನು ಮಾಡಿಕೊಂಡು, ಪರಸ್ಪರ ಸಹಕಾರದೊಂದಿಗೆ ಭೂಮಿಯ ಮೇಲಿನ ಜೀವೈವಿಧ್ಯದ ರಕ್ಷಣೆಯ ಕೆಲಸಗಳನ್ನು ಮಾಡಬೇಕೆಂದೂ ಎಸ್‌ಡಿಜಿ 15ರಲ್ಲಿ ಸೂಚಿಸಲಾಗಿದೆ.

ಭೂಮಿಯ ಮೇಲಿನ ಎಲ್ಲ ಜೀವಿಗಳನ್ನು ರಕ್ಷಿಸುವುದು ಮತ್ತು ಇದನ್ನು ಸಾಧ್ಯವಾಗಿಸುವ ನಿಟ್ಟನಲ್ಲಿ ಎಲ್ಲ ಬಗೆಯ ನೈಸರ್ಗಿಕ ಸಂಪನ್ಮೂಲಗಳ ಬಳಕೆಯನ್ನು ಮಿತಗೊಳಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಬಗೆಗಿನ ಗುರಿಗಳನ್ನು ತಲುಪಬೇಕಾದರೆ ಎಲ್ಲ ಬಗೆಯ ಸಂಸ್ಥೆಗಳೂ ಮತ್ತು ವೈಯಕ್ತಿಕ ನೆಲೆಯಲ್ಲಿ ಪ್ರತಿ ವ್ಯಕ್ತಿಯೂ ತಮ್ಮ ಕೈಲಾದ ಕೆಲಸ ಮಾಡುವುದು, ಗುರಿಗಳನ್ನು ತಲುಪಲು ಸಹಕರಿಸುವುದು, ಗುರಿಗಳ ಬಗೆಗೆ ಜಾಗೃತಿ ಮೂಡಿಸುವುದು ಮುಂತಾದ ಕೆಲಸಗಳಲ್ಲಿ ತೊಡಗಬೇಕಾಗುತ್ತದೆ. ಸಹಜವಾಗಿಯೇ ಸಹಕಾರಿ ಸಂಘಗಳಿಂದಲೂ ನಿರ್ದಿಷ್ಟ ಕಾರ್ಯಚಟುವಟಿಕೆಗಳನ್ನು ಈ ಗುರಿಯು ಬಯಸುತ್ತದೆ. ಜಗತ್ತಿನ ಹಲವೆಡೆ ಈಗಾಗಲೇ ಸಹಕಾರಿ ಸಂಘಗಳು ಭೂಮಿಯ ಮೇಲಿನ ಜೀವವೈವಿಧ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿವೆ. ಉದಾಹರಣೆಗೆ ಅರ್ಜೆಂಟೈನಾದ ಜುಜುಯ್ ಪ್ರಾಂತ್ಯದಲ್ಲಿ 109ಜನ ಸಣ್ಣ ಕೃಷಿಕರು ಸೇರಿ ಆರಂಭಿಸಿರುವ ಸಹಕಾರಿ ಸಂಘದ (Cauqueva) ಎಲ್ಲ ಸದಸ್ಯರೂ ತಮಗೆ ಸೇರಿದ ಭೂಮಿಯಲ್ಲಿ ಸ್ಥಳೀಯ ಸಸ್ಯಗಳನ್ನೇ ಬೆಳೆಯುತ್ತಿದ್ದಾರೆ. ಸಹಕಾರಿ ಸಂಘವೇ ನಡೆಸುವ ಸಣ್ಣ ಹೋಟೆಲ್‌ನಲ್ಲಿ ಒಟ್ಟು ಸೇರುವ ಈ ಕೃಷಿಕರು ಸ್ಥಳೀಯ ಬೆಳೆಗಳನ್ನು ಬೆಳೆಯುವುದರಿಂದ ಆಗುವ ಅನುಕೂಲಗಳನ್ನು ಚರ್ಚಿಸಿ ತಿಳಿದುಕೊಂಡು ಅದರಂತೆ ತಾವು ಬೆಳೆಯುವ ಬೆಳೆಗಳು ಮತ್ತು ತಮಗೆ ಸೇರಿದ ಪ್ರದೇಶದಲ್ಲಿ ಬೆಳೆಯುವ ಮರಗಿಡಗಳು ಇವೆಲ್ಲವೂ ಪಾರಂಪರಿಕವಾಗಿ ಬೆಳೆಯುತ್ತಿದ್ದ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 30
Licensed to post without Prepayment License No. PMG BG/WPP-384/2020-2022.

ಸ್ಥಳೀಯ ಸಸ್ಯಗಳೇ ಆಗುವಂತೆ ಮಾಡಿದ್ದಾರೆ. ಇಂಡೋನೇಶ್ಯಾದ ಸುಲವೆಸಿ ಪ್ರಾಂತ್ಯದಲ್ಲಿ ತೇಗದ ಮರಗಳನ್ನು ಬೆಳೆಯುವ ಕೃಷಿಕರು ತಮ್ಮದೇ ಸಹಕಾರಿ ಸಂಘವನ್ನು ಸ್ಥಾಪಿಸಿಕೊಂಡಿದ್ದು, ತೇಗದ ಮರಗಳ ನಾಶದಿಂದಾಗುವ ಪರಿಸರಹಾನಿ, ಈ ಮರಗಳ ಕಳ್ಳಸಾಗಣೆಯನ್ನು ತಡೆಯುವುದು, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಮೌಲ್ಯಕ್ಕೆ ಮಾರಾಟವಾಗುವ ಉತ್ತಮ ಗುಣಮಟ್ಟದ ಮರಗಳನ್ನು ಬೆಳೆಯುತ್ತ, ಆದಷ್ಟು ಕಡಿಮೆ ಮರಗಳಲ್ಲಿ ಹೆಚ್ಚಿನ ಗಳಿಕೆ ಸಾಧ್ಯವಾಗುವಂತೆ ಕಾರ್ಯತಂತ್ರ ರೂಪಿಸಿದ್ದಾರೆ. ಅಮೇರಿಕದ ಸಾಂತಕ್ರೂಜ್ ಮೌಂಟನ್ ಕಾರ್ಬನ್ ಕೋಆಪರೇಟಿವ್ ತನ್ನ ಸದಸ್ಯರಿಗೆ ಸುಸ್ಥಿರ ಅರಣ್ಯ ವ್ಯವಸ್ಥಾಪನೆಯ ಕುರಿತು ತರಬೇತಿ ನೀಡಿ ಅವರುಗಳು ಅರಣ್ಯಗಳನ್ನು ಬೆಳೆಯುವ ಮತ್ತು ಸಂರಕ್ಷಿಸುವ ಕೆಲಸದಲ್ಲಿ ತೊಡಗುವಂತೆ ಮಾಡಿರುವ ಜೊತೆಗೆ, ಅವರು ಬೆಳೆಸುವ ಅರಣ್ಯದ ಗುಣಮಟ್ಟದ ಮೇಲೆ ಕಾರ್ಬನ್ ಕ್ರೆಡಿಟ್‌ಗಳನ್ನು ನೀಡುವುದರ ಮೂಲಕ ಅವರ ದುಡಿಮೆಗೆ ಹೆಚ್ಚಿನ ಮೌಲ್ಯ ಸಿಗುವಂತೆ ಮಾಡುತ್ತಿದೆ. ರ್‍ವಾಂಡ ದೇಶದಲ್ಲಿನ ಸುಮಾರು 15 ಜೇನುಸಾಕಣಾ ಸಹಕಾರಿ ಸಂಘಗಳು ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಅರಣ್ಯವನ್ನು ಬೆಳೆಯುವ ಮತ್ತು ಸ್ಥಳೀಯ ಮರಗಿಡಗಳನ್ನು ರಕ್ಷಿಸುವುದರ ಮೂಲಕ ಸ್ಥಳೀಯ ಪರಿಸರದ ಗುಣಮಟ್ಟ ವೃದ್ಧಿಯಾಗುವಂತೆ ಮಾಡುವುದರ ಜೊತೆಗೆ ಉತ್ತಮ ಗುಣಮಟ್ಟದ ಜೇನುತುಪ್ಪವನ್ನು ಉತ್ಪಾದನೆ ಮಾಡುವುದನ್ನೂ ಸಾಧ್ಯವಾಗಿಸಿಕೊಂಡಿದ್ದಾರೆ.

ಸಹಕಾರಿ ಸಂಘಗಳು ಭೂಮಿಯ ಮೇಲಿನ ಜೀವವೈವಿಧ್ಯವನ್ನು ಜತನಮಾಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ. ಇವುಗಳನ್ನು ತಮ್ಮ ವ್ಯವಹಾರ ಚಟುವಟಿಕೆಗಳ ಭಾಗವಾಗಿ ಮತ್ತು ತಮ್ಮ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮಗಳ ಮೂಲಕ ಮಾಡುವುದು ಸಾಧ್ಯವಿದೆ. ಈ ಕೆಳಗೆ ಸೂಚಿಸಿರುವ ಕೆಲವು ಚಟುವಟಿಕೆಗಳನ್ನು ವಿವಿಧ ಸಹಕಾರಿ ಸಂಘಗಳು ಹಮ್ಮಿಕೊಳ್ಳಬಹುದಾಗಿದೆ.

1. ಕೃಷಿ ಸಹಕಾರಿ ಸಂಘಗಳು ಭೂಮಿಯ ಫಲವತ್ತತೆಯನ್ನು ರಕ್ಷಿಸುವ ಕುರಿತಂತೆ ಅಗತ್ಯ ಮಾಹಿತಿಗಳನ್ನು ತಮ್ಮ ಸದಸ್ಯರಿಗೆ ನೀಡಲು ಕ್ರಮ ಕೈಗೊಳ್ಳಬಹುದು
2. ತಾವು ಬಳಸುವ ಮತ್ತು ಮಾರಾಟ ಮಾಡುವ ಸಾಮಗ್ರಿಗಳು ಪರಿಸರ ಪ್ರೇಮಿಯಾಗಿದ್ದು ಜಾಗತಿಕ ತಾಪಮಾನ ಏರಿಕೆಗೆ ಪೂರಕವಾಗಿಲ್ಲದಂತೆ ಎಲ್ಲ ಸಹಕಾರಿ ಸಂಘಗಳೂ ಕ್ರಮವಹಿಸಬಹುದು
3. ಭೂಮಿಯ ಮೇಲಿನ ಜೀವವೈವಿಧ್ಯದ ರಕ್ಷಣೆಗೆ ಪೂರಕವಾದ ಯೋಜನೆಗಳಿಗೆ ಉತ್ತೇಜನ ನೀಡುವಂತಹ ಪತ್ತಿನ ಯೋಜನೆಗಳು, ಮಾರುಕಟ್ಟೆ ಸಹಾಯ ಮುಂತಾದುವನ್ನು ಆಯಾ ಚಟುವಟಿಕೆಗಳಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳು ಹಮ್ಮಿಕೊಳ್ಳಬಹುದು.
4. ಸಹಕಾರಿ ಸಂಘಕ್ಕೆ ಭೇಟಿ ನೀಡುವವರಿಗೆಲ್ಲ ಮಾಹಿತಿ ದೊರೆಯುವಂತೆ ಪರಿಸರ, ಜೀವವೈವಿಧ್ಯ, ಜಾಗತಿಕ ತಾಪಮಾನ ಮುಂತಾದ ವಿಷಯಗಳ ಬಗ್ಗೆ ಭಿತ್ತಿ ಪತ್ರಗಳನ್ನು ಪ್ರದರ್ಶಿಸುವುದು, ಕರಪತ್ರಗಳನ್ನು ಹಂಚುವುದು ಮುಂತಾದುವುಗಳನ್ನು ಮಾಡಬಹುದು.
5. ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ, ಸಂಯುಕ್ತ ರಾಷ್ಟ್ರ ಸಂಸ್ಥೆ ಮುಂತಾದುವುಗಳು ಕಾಲದಿಂದ ಕಾಲಕ್ಕೆ ಪ್ರಚುರ ಪಡಿಸುವ ಕಾರ್ಯತಂತ್ರಗಳು, ಇತರ ಸಹಕಾರಿ ಸಂಸ್ಥೆಗಳ ಅನುಕರಣೀಯ ಚಟುವಟಿಕೆಗಳ ಮಾಹಿತಿ ಮುಂತಾದುವುಗಳನ್ನು ಗಮನಿಸಿ ಅವುಗಳಲ್ಲಿ ಸಾಧ್ಯವಾದುವುಗಳನ್ನು ತಮ್ಮದೇ ರೀತಿಯಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಿಸಬಹುದು.
6. ಸ್ಥಳೀಯ ನೆಲೆಯಲ್ಲಿ ನಶಿಸಿ ಹೋಗುತ್ತಿರುವ ಪ್ರಾಣಿ, ಪಕ್ಷಿ, ಸಸ್ಯಗಳು ಹೀಗೆ ವಿವಿಧ ಜೀವವೈವಿಧ್ಯಗಳನ್ನು ಗುರುತಿಸಿ ಅವುಗಳನ್ನು ರಕ್ಷಿಸುವ ಚಟುವಟಿಕೆಗಳನ್ನು ನಡೆಸಬಹುದು.
7. ಸಹಕಾರಿ ಸಂಸ್ಥೆಗಳು ತಮ್ಮ ಕಛೇರಿ, ವ್ಯಾಪಾರದ ಸ್ಥಳ ಮುಂತಾದುವುಗಳಿಗೆ ಸಂಬಂಧಿಸಿದ ಕಟ್ಟಡಗಳನ್ನು ಪರಿಸರ ಸ್ನೇಹಿಯನ್ನಾಗಿ ವಿನ್ಯಾಸಗೊಳಿಸಬಹುದು.

ಭೂಮಿಯ ಮೇಲಿನ ಜೀವವೈವಿಧ್ಯದ ರಕ್ಷಣೆ ಎನ್ನುವುದು ಅತ್ಯಂತ ವಿಶಾಲವೂ, ವೈವಿಧ್ಯವೂ ಆದ ಪ್ರಕ್ರಿಯೆಯಾಗಿದ್ದು ಇದು ಒಂದಕ್ಕೊಂದು ಪೂರಕವಾದ ಹಲವು ಕಾರ್ಯತಂತ್ರಗಳಿಂದ ಮಾತ್ರವೇ ಸಾಧ್ಯವಾಗುವಂತಹುದು. ಹಾಗೆಯೇ ವ್ಯಕ್ತಿಗಳು, ಸಂಸ್ಥೆಗಳು, ಸರಕಾರಗಳು, ಪ್ರಜಾಸಮಾಜ ಈ ಎಲ್ಲರ ಅರಿವು ಮತ್ತು ಪೂರಕ ಪ್ರಯತ್ನಗಳಿಂದ ಮಾತ್ರವೇ ಸಾಧ್ಯವಾಗುವಂತಹುದು. ಆದುದರಿಂದ ಸಹಕಾರಿ ಸಂಘಗಳು ತಮ್ಮದೇ ನೆಲೆಯಲ್ಲಿ ತಮಗೆ ಸಾಧ್ಯವಾಗುವ ರೀತಿಯಲ್ಲಿ ಈ ಗುರಿಯ ಸಾಧನೆಗೆ ಸಹಕರಿಸಬಹುದು. ಪ್ರಕೃತಿ, ಪರಿಸರ, ಜೀವಜಂತುಗಳು, ಸಸ್ಯ ಸಂಪತ್ತು, ನೆಲ, ಜಲ, ಆಕಾಶ ಈ ಎಲ್ಲವುಗಳಿಗೆ ಅಥವಾ ಇವುಗಳಲ್ಲಿ ಯಾವುದಕ್ಕಾದರೂ ಅನುಕೂಲವಾಗುವಂತಹ ಯಾವುದೇ ಚಟುವಟಿಕೆ, ಎಷ್ಟು ಸಣ್ಣ ಪ್ರಮಾಣದಲ್ಲಿದ್ದರೂ ಸಹ ನಡೆಸಬಹುದು. ಈ ಭೂಮಿಯ ಹೊರೆ ಹೆಚ್ಚಾಗುವ ವೇಗ ಕಡಿಮೆಮಾಡುವ ಗುರಿಯಿಂದ ಕಾರ್ಯ ಪ್ರವೃತ್ತರಾಗುವುದು ಮಾತ್ರ ಜವಾಬ್ದಾರಿಯುತ ಸಂಸ್ಥೆಗಳಾದ ಸಹಕಾರಿ ಸಂಘಟನೆಗಳು ನಿರ್ವಹಿಸಲೇಬೇಕಾದ ಜವಾಬ್ದಾರಿ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ಡಾ. ಎನ್. ಎಸ್. ಪಾಟೀಲ, ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010